ಜಿಲ್ಲಾ ಪಂಚಾಯತ, ಬೆಳಗಾವಿ

## ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ (ದ).

## ನಗರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಬೆಳಗಾವಿ.

ಎಸ್. ಎಸ್. ಎಲ್. ಸಿ ವಿದ್ಯಾರ್ಥಿಗಳಿಗೆ

# “ಪ್ರಶ್ನೆ ಕೋಠಿ”

**ನಾಲ್ಕು ಮಾದರಿ ಪ್ರಶ್ನೆಪತ್ರಿಕೆಗಳು (ಉತ್ತರಸಹಿತ)**

### ಮಾರ್ಗದರ್ಶಕರು


**ಡಾ॥ ಶ್ರೀ. ಎ.ಬಿ. ಪುಂಡಲೀಕ**

ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ (ದ).

**ಶ್ರೀ. ರವಿ ಭಜಂತ್ರಿ**

ಕ್ಷೇತ್ರ ಶಿಕ್ಷಣಾಧಿಕಾರಿಗಳು, ನಗರ ವಲಯ, ಬೆಳಗಾವಿ.

**ಶ್ರೀ. ಕೆ. ಕೆ. ಚಾಂದವಾಲೆ**

ಕಾರ್ಯಾಧ್ಯಕ್ಷರು, ಎಸ್.ಟಿ.ಎಫ್ ಬಳಗ ನಗರ ವಲಯ, ಬೆಳಗಾವಿ.

ಮುಖ್ಯೋಪಾಧ್ಯಾಯರು, ಬಾಶೀಬಾನ್ ಪ್ರೌಢಶಾಲೆ, ಬೆಳಗಾವಿ.


### ಬೆರಳಚ್ಚುಗಾರರು


**ಶ್ರೀ. ಆರ್.ವ್ಹಿ. ಅನಗೋಳ**

ಉಪಾಧ್ಯಕ್ಷರು ಎಸ್.ಟಿ.ಎಫ್ ಬಳಗ ನಗರ ವಲಯ, ಬೆಳಗಾವಿ.

ಸಹ ಶಿಕ್ಷಕರು, ಕೆ.ಎಲ್.ಎಸ್. ಆಂಗ್ಲ ಮಾಧ್ಯಮ ಪ್ರೌಢಶಾಲೆ, ತಿಲಕವಾಡಿ, ಬೆಳಗಾವಿ


### ರಚನಾಕಾರರು


ಬೆಳಗಾವಿ ನಗರ ವಲಯದ ಪ್ರೌಢಶಾಲಾ ದ್ವಿತೀಯ ಭಾಷಾ (ಕನ್ನಡ) ಶಿಕ್ಷಕರ ಬಳಗ

## ಮಾದರಿ ಪ್ರಶ್ನೆಪತ್ರಿಕೆ 01

**ವಿಷಯ : ದ್ವಿತೀಯ ಭಾಷೆ – ಕನ್ನಡ** **ವಿಷಯ ಸಂಕೇತ : 33–K**

**ಅವಧಿ : 3 ಗಂಟೆ** **ಗರಿಷ್ಟ ಅಂಕಗಳು : 80**

---

**ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು:**

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ 38 ಪ್ರಶ್ನೆಗಳನ್ನು ಹೊಂದಿದೆ.
2. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

---

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **4 X 1 = 4**

1. 'ಮೂಡಣ' ಈ ಪದದ ಅರ್ಥ
   ಎ) ಪೂರ್ವ ಬಿ) ಪಶ್ಚಿಮ ಕ) ತೆಂಕಣ ಡ) ಬಡಗಣ
2. 'ಜನ್ಮ' ಪದದ ತದ್ಭವ ರೂಪ
   ಎ) ಮರಣ ಬಿ) ಜಣುಮ ಕ) ಜನುಮ ಡ) ಜನನ
3. 'ಜೀವೋಲ್ಲಾಸ' ಪದದ ಸಂಧಿಯ ರೂಪ
   ಎ) ಲೋಪ ಬಿ) ಆದೇಶ ಕ) ಆಗಮ ಡ) ಗುಣ
4. 'ಆಸಕ್ತಿ' ಪದದ ವಿರುದ್ಧಾರ್ಥಕ ರೂಪ
   ಎ) ಶಕ್ತಿ ಬಿ) ನಿರಾಸಕ್ತಿ ಕ) ಆಶಕ್ತ ಡ) ಅಪಶಕ್ತಿ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **12 X 1 = 12**

5. ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು?
6. ಅಸಿ – ಮಸಿ ಎಂದರೇನು?
7. ಈ ನಾಡಿನ ಬೆನ್ನೆಲುಬು ಯಾರು?
8. ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ?
9. ಗೋಪಾಲನ ಬೆಳಗಿನ ಮುಖ್ಯ ಕೆಲಸ ಯಾವುದಾಗಿತ್ತು?
10. ಗೋಪಾಲನ ಗೆಳೆಯರ ಹೆಸರೇನು?
11. ಏಣಿ ಜನರಿಗೆ ಮಾಡಿದ ಉಪಕಾರವೇನು?
12. ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಕವಿ ಹೇಳಿದ್ದಾರೆ?
13. ಕುಣಿಗಲ್ ಕೆರೆಯ ಆಕಾರವನ್ನು ಯಾವ ಹಣ್ಣಿಗೆ ಹೋಲಿಸಲಾಗಿದೆ?
14. ಕುಣಿಗಲ್ ಕೆರೆಯು ಯಾವ ದಿಕ್ಕಿನಲ್ಲಿದೆ?
15. ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು?
16. ಅರ್ಜುನನು ಯಾರನ್ನು ನಾಡನರಿ ಎಂದು ಕರೆದಿದ್ದಾನೆ?

**III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **8 X 2 = 16**

17. ಗಿಳಿಯು ಇಂದ್ರನನ್ನು ಯಾವ ವರ ಕೇಳಿತು?
18. ಪುಟ್ಟರಾಜ ಗವಾಯಿಗಳು ಯಾವ ಯಾವ ವಿದ್ಯೆಗಳಲ್ಲಿ ನಿಷ್ಣಾತರಾದರು?
19. ಪುಟ್ಟರಾಜರ ವೇಷಭೂಷಣಗಳು ಹೇಗಿದ್ದವು?

20. ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು?
21. ಕುಣಿಗಲ್ ಕೆರೆ ನೋಡುವವರಿಗೆ ಹೇಗೆ ಕಾಣುತಿತ್ತು?
22. ಒಡಲು ಒಡೆವಂತೆ ಅರ್ಜುನನು ಮನದಲಿ ನಗಲು ಕಾರಣವೇನು?
23. ವೈದ್ಯರ ಯಾವ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದವು?
24. ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಹೇಗೆ ಉಳಿಸಿದರು?

**IV. ಕೆಳಗಿನ ಕವಿ / ಸಾಹಿತಿ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.**

25. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು **1 X 3 = 3**

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ.** **1 X 3 = 3**

26. ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನ.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ. ಲಕ್ಷಣ ಬರೆದು ಸಮನ್ವಯಗೊಳಿಸಿ.** **1 X 3 = 3**

27. "ಬಾಳೆಯ ಹಣ್ಣಿನಂತೆ ಬಾಗಿದ ಕುಣಿಗಲ್ ಕೆರೆ"

**VII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ.**

28. "ಕಾಯಕವೇ ಕೈಲಾಸ" **1 X 3 = 3**

**ಅಥವಾ**

"ಹಕ್ಕಿಗಳಿಗೆ ಗೂಡು ಮಕ್ಕಳಿಗೆ ತಾಯಿ"

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **5 X 3 = 15**

29. "ಏನಾದರೂ ವರವನ್ನು ಕೇಳು ಕೊಡುತ್ತೇನೆ"
30. "ಅಮ್ಮನ ಮಾತು ಸುಳ್ಳಾಗಲಾರದು"
31. "ಅವಕಾಶ ಮತ್ತು ಅದೃಷ್ಟಕ್ಕೆ ತಮ್ಮ ಸಂತತಿಯ ಉಳಿವನ್ನು ಒಡ್ಡುತ್ತವೆ."
32. "ನಾನೂ ನೋಡುತ್ತೇನೆ ಹೇಗೆ ಇಳಿಯುತ್ತಾರೆಂದು"
33. "ಸಿಡುಕು ಮಿಡುಕನು ತೊರೆದು ಮೌನಿಯಾಗು"

**IX. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1 X 4 = 4**

34. ಏಕಾಂಗಿ__________________
________________________
________________________
__________________ನಡೆದನು ॥

**ಅಥವಾ**

ಕಾಡು ಕಾಡು ಅಲೆದ ____________
________________________
________________________
__________________ ಕಂಡಿತು ॥

**X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1 X 4 = 4**

35. ನರನ ಜೀವನದ ಗುರಿ ಯಾವುದಾಗಿರಬೇಕೆಂದು ಅಡಿಗರು ಆಶಿಸಿದ್ದಾರೆ?

**ಅಥವಾ**

ಗುರಿ ಪದ್ಯದ ಸಾರಾಂಶ ಬರೆಯಿರಿ.

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡುಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ 1 X 4 = 4 (2+2)**

ಇಡೀ ವಿಶ್ವವನ್ನೇ ಕಂಗೆಡಿಸಿದ ಅಪಾಯಕಾರಿ ಕರೋನ ವೈರಸ್‌ಗೆ 16ನೇ ಜನೇವರಿ 2021ರಲ್ಲಿ ಲಸಿಕೆ ಬಿಡುಗಡೆಮಾಡಲಾಯಿತು. ಈ ದಿನದಂದು ದೇಶಾದ್ಯಂತ 3006 ಲಸಿಕಾ ಕೇಂದ್ರಗಳು ಏರ್ಪಾಟು ಮಾಡಿರುವುದು ಸಂತಸದ ಸಂಗತಿ. ಪ್ರತಿದಿನ 100 ಜನರಿಗೆ ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಲಸಿಕೆ ವಿತರಣೆ ಮಾಡಲಾಗುತ್ತದೆ. ಭಾರತದಲ್ಲಿ ತಯಾರಿಸಿದ ಲಸಿಕೆ ಇದಾಗಿದ್ದು 1.65ಕೋಟಿ ಕೋವಿಡ್ ಡೋಸ್‌ಗಳನ್ನು ಕೇಂದ್ರ ಸರ್ಕಾರ ಖರೀದಿಸಿದೆ. ಮೊದಲ ಹಂತದಲ್ಲಿ ಕರೋನಾ ವಾರಿಯರ್ಸ್‌ಗೆ, ಕೇಂದ್ರ ಆರೋಗ್ಯ ಸಿಬ್ಬಂದಿಗೆ, ಸೇನಾ ಸಿಬ್ಬಂದಿಗೆ, ಆರೋಗ್ಯ ಕಾರ್ಯಕರ್ತರಿಗೆ ನೀಡಲಾಗುತ್ತದೆ. ಕೋವಿಶೀಲ್ಡ್ ಲಸಿಕೆಯ ಒಂದು ವಲಯನಲ್ಲಿ 5ಎಂ.ಎಲ್ ಇದ್ದು ಒಬ್ಬ ವ್ಯಕ್ತಿಗೆ 0.5 ಎಂಎಲ್ ನಂತೆ ಹತ್ತು ಮಂದಿಗೆ ನೀಡಲಾಗುತ್ತದೆ. ದೇಶದ ಸಂಪೂರ್ಣ ಮತ್ತು ವಿಶ್ವದ ಅತಿದೊಡ್ಡ ವ್ಯಾಕ್ಸಿನೇಷನ್ ಕಾರ್ಯಕ್ರಮವಾಗಿದೆ.

**36. ಪ್ರಶ್ನೆಗಳು :**

ಅ) ಕರೋನ ವೈರಸ್‌ಗೆ ಬಿಡುಗಡೆ ಮಾಡಿದ ಲಸಿಕೆಗಳಾವುವು? ಅವುಗಳನ್ನು ಯಾವಾಗ ಬಿಡುಗಡೆ ಮಾಡಲಾಯಿತು?

ಬ) ಮೊದಲ ಹಂತದಲ್ಲಿ ಕರೋನ ಲಸಿಕೆಯನ್ನು ಯಾರಿಗೆ ನೀಡಲಾಗುತ್ತದೆ?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1 X 4 = 4**

37. ಪರಿಸರ ಮಾಲಿನ್ಯ – ಪರಿಹಾರೋಪಾಯಗಳು

**ಅಥವಾ**

ಗ್ರಂಥಾಲಯ

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1 X 5 = 5**

38. ನೀವು ಯುವರಾಜ 10ನೇ ತರಗತಿ, ಸರ್ಕಾರಿ ಪ್ರೌಢಶಾಲೆ ಶಾಹೂನಗರ ಧಾರವಾಡ ಎಂದು ಭಾವಿಸಿ ನಿಮ್ಮ ಅಣ್ಣನ ಮದುವೆಯ ಸಮಾರಂಭಕ್ಕಾಗಿ 3 ದಿನಗಳ ರಜೆ ಕೋರಿ ಶಾಲೆಯ ಮುಖ್ಯೋಪಾಧ್ಯಾಯರಿಗೊಂದು ರಜೆ ಪತ್ರ ಬರೆಯಿರಿ.

**ಅಥವಾ**

ನೀವು ಮೋಹಿನಿ ಎಂದು ಭಾವಿಸಿ, ನಿಮ್ಮ ತರಗತಿಯ ವಿದ್ಯಾಭ್ಯಾಸ ಕುರಿತು ಮಂಗಳೂರಿನ ಗಾಂಧೀನಗರದಲ್ಲಿರುವ ನಿಮ್ಮ ತಂದೆಗೊಂದು ಪತ್ರ ಬರೆಯಿರಿ.

* * * * * *

## ಮಾದರಿ ಪ್ರಶ್ನೆಪತ್ರಿಕೆ 02

ವಿಷಯ : ದ್ವಿತೀಯ ಭಾಷೆ – ಕನ್ನಡ ವಿಷಯ ಸಂಕೇತ : 33–K

ಅವಧಿ : 3 ಗಂಟೆ ಗರಿಷ್ಟ ಅಂಕಗಳು : 80

---

**ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು:**

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ 38 ಪ್ರಶ್ನೆಗಳನ್ನು ಹೊಂದಿದೆ.
2. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

---

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **4 X 1 = 4**

1. 'ರಾಟೆ' – ಪದದ ಸಮಾನಾರ್ಥಕ ಪದ

   ಅ) ಚಕ್ರ ಬ) ಕಾಲಚಕ್ರ ಕ) ದ್ವಿಚಕ್ರ ಡ) ಧರ್ಮಚಕ್ರ

2. 'ಯೋಗಿ' ಈ ಪದದ ತದ್ಭವ ರೂಪ

   ಅ) ಬೋಗಿ ಬ) ಜೋಗಿ ಕ) ಜಾನ ಡ) ದೃಷ್ಠಿ

3. 'ಮನದಟ್ಟು' ಈ ಪದದಲ್ಲಿರುವ ಸಂಧಿ

   ಅ) ಆಗಮಸಂಧಿ ಬ) ಆದೇಶಸಂಧಿ ಕ) ಗುಣಸಂಧಿ ಡ) ಲೋಪಸಂಧಿ

4. 'ಸಜೀವ' – ಈ ಪದದ ವಿರುದ್ಧಾರ್ಥಕ ಪದ

   ಅ) ನಿರ್ಜಿವ ಬ) ಜೀವ ಕ) ಪ್ರಾಣ ಡ) ಮೃತ್ಯೂ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **12 X 1 = 12**

5. ವಿಷದ ಬಾಣವು ಮರಕ್ಕೆ ಏಕೆ ತಗುಲಿತು?
6. ಈ ನಾಡಿನ ಬೆನ್ನೆಲುಬು ಯಾರು?
7. ಪುಟ್ಟರಾಜರ ತಂದೆ ತಾಯಿಗಳ ಹೆಸರೇನು?
8. ಪುಟ್ಟರಾಜರು ಖಾದಿ ಬಟ್ಟೆ ತೊಡಲು ನಿರ್ಧರಿಸಿದ್ದು ಏಕೆ?
9. ಹಕ್ಕಿಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ?
10. ಅಸ್ಪ್ರಶ್ಯತೆ ಆಚರಿಸುವ ಮನುಷ್ಯನಿಗೆ ಹಕ್ಕಿಗಳು ಯಾವ ಪಾಠ ಹೇಳುತ್ತವೆ?
11. ಗೋಪಾಲನ ಗೆಳೆಯರ ಹೆಸರುಗಳೇನು?
12. ಕವಯತ್ರಿ ತ್ರಿಶಂಕುಗಳು ಎಂದು ಯಾರನ್ನು ಕರೆದಿದ್ದಾರೆ?
13. ತಿಮಿರಕ್ಕೆ ವೈರಿ ಯಾವುದು?
14. ಸಿದ್ದಾರ್ಥನು ಕಂಡುಕೊಂಡ ಬದುಕಿನ ಗೂಢಾರ್ಥವೇನು?
15. ಶಿವನು ಕುಣಿಗಲ್ ಕೆರೆ ನೋಡಲು ಏಕೆ ಬಂದನು?
16. ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು?

**III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **8 X 2 = 16**

17. ಸಾಮಾನ್ಯವಾದ ಲೋಕವರ್ತನೆ ಯಾವುದು?
18. ಬನದ ಗೋಪಾಲನ ವೇಷಭೂಷಣಗಳು ಹೇಗಿದ್ದವು?
19. ಗೋಪಾಲನು ಹೂಬನದ ಸೊಗಸನ್ನು ಯಾವ ರೀತಿ ವರ್ಣಿಸಿದನು?
20. ಕೂಗಾಟದ ಬದುಕು ನಿಷ್ಪ್ರಯೋಜಕ ಎಂಬುದಕ್ಕೆ ಕವಿ ನೀಡುವ ನಿದರ್ಶನಗಳಾವುವು?
21. ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಗಳನ್ನು ಏಕೆ ಖಂಡಿಸಿದ್ದಾರೆ?
22. 'ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ' – ಈ ಮಾತಿನ ಅರ್ಥ ವೈಶಿಷ್ಟ್ಯವೇನು?
23. ಹಾವನ್ನು ಕಂಡು ವೈದ್ಯರ ತಲೆಯಲ್ಲಿ ಯಾವ ವಿಚಾರಗಳು ಮೂಡಿಬಂದವು?
24. 'ಕಳ್ಳರ ಗುರು' ಪಾಠದಿಂದ ನಾವು ಕಲಿತು ಕೊಳ್ಳಬೇಕಾದ ವಿಚಾರಗಳೇನು?

**IV. ಕೆಳಗಿನ ಕವಿ / ಸಾಹಿತಿ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.**

**25**. ಕುಮಾರವ್ಯಾಸ **1X 3 = 3**

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ.** **1X 3 = 3**

**26**. ಮರವ ಅಪ್ಪಿದಂತ ಬಳ್ಳಿ ಹೂವ ಮುಡಿದು ನಕ್ಕಿತು
ಹಕ್ಕಿಯೊಂದು ತನ್ನ ಮರಿಗೆ ಗುಟುಕು ಕೊಟ್ಟು ಹಾರಿತು
ಹುತ್ತಿನಿಂದ ಇರುವೆ ಗುಂಪು ಸಾಲುಗಟ್ಟಿ ನಡೆಯಿತು
ಬೆಳ್ಳಕ್ಕಿ ಹಿಂಡುಗಟ್ಟಿ ಬಾನಿಗೇಣಿ ಹಾಕಿತು.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸುವುದು :** **1X3 = 3**

**27.** "ಸಂಗೀತ ಲೋಕದಲ್ಲಿ ಧೃವತಾರೆಯಂತೆ ಬೆಳಗುತ್ತಿರುವ ಪಂಡಿತ ಪುಟ್ಟರಾಜ ಗವಾಯಿಗಳು".

**VII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ. 1X3 = 3**

**28.**"ಹಾಸಿಗೆ ಇದಷ್ಟು ಕಾಲು ಚಾಚು"

**ಅಥವಾ**

"ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು'

**VIII ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **5X3 =15**

29. "ಏನಾದರೂ ವರವನ್ನು ಕೇಳು ಕೊಡುತ್ತೇನೆ"
30. "ನಾನು ನೋಡುತ್ತೇನೆ ಹೇಗೆ ಇಳಿಯುತ್ತಾರೆಂದು"
31. "ಅವನು ಬಂದರೆ ಕರೆದುಕೊಂಡು ಹೋಗು ತಾಯಿ"
32. "ಕಬ್ಬಕ್ಕಿ ಬಾಯಿ ಬಿಡುತಾವೆ"
33. "ಹುಟ್ಟಿದ ಮಕ್ಕಳಿಗೆ ಬದುಕಿನ ಪಾಠ ಹೇಳುವ ಶಾಲೆ ಅದು?"

**IX. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1 X 4 = 4**

| | | |
|---|---|---|
| 34.ಕೆಸರೊಳಿದ್ದರು ____________ | | ಒಂದು ಬಾಣಕೆ ____________ |
| ______________________ | ಅಥವಾ | ______________________ |
| ______________________ | | ______________________ |
| ____________ ಸಾರ್ಥಕತೆಗೆ. | | ____________ ಹಗಲಿರುಳು |

**X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 1 X 4 = 4**

35. ದೇಶದ ಬಜೆಟ್ ನಲ್ಲಿ ರಕ್ಷಣಾ ಇಲಾಖೆಗೆ ಹೆಚ್ಚಿನ ಹಣವನ್ನು ಏಕೆ ಮೀಸಲಾಗಿಡುತ್ತದೆ?

ಅಥವಾ

'ಕೃಷಿಕ ನಾಡಿನ ಬೆನ್ನೆಲುಬು' ಈ ಮಾತನ್ನು ಸಮರ್ಥಿಸಿರಿ?

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡುಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1X 4 = 4 (2+2)**

"ದೇಶ ಸುತ್ತ ಕೋಶ ಓದು' ಎಂದು ನಮ್ಮ ಹಿರಿಯರು ಹೇಳಿದ್ದಾರೆ ಲೋಕದ ವಿಸ್ಮಯಗಳನ್ನು ತಿರುಗಾಟದ ಮೂಲಕ ಕಾಣಬಯಸುವ ಎಲ್ಲರಿಗೂ ಪ್ರವಾಸ ಇಷ್ಟವಾಗುತ್ತದೆ. ಪ್ರವಾಸದಿಂದ ದೇಶ– ವಿದೇಶಗಳ ನಂಬಿಕೆ ವಿಚಾರ, ಭಾಷೆ, ಊಟ, ಉಡಿಗೆಗಳ ಪರಿಚಯವಾಗುತ್ತದೆ. ಬೇರೆ ಬೇರೆ ಜನರ ಸ್ವಭಾವ ಅರ್ಥವಾಗುತ್ತದೆ. ಪ್ರವಾಸಗಳನ್ನು ಕೈಗೊಂಡು ನಮ್ಮ ಅನುಭವ ಮತ್ತು ಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದು. ಅಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರವಾಸ ಕಥನಗಳಿಗೆ ವಿಶೇಷ ಸ್ಥಾನವಿದೆ. ಪ್ರವಾಸ ಕಥನಕಾರರಲ್ಲಿ ಶಿವರಾಮಕಾರಂತ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ವಿ.ಕೃ ಗೋಕಾಕ್, ಜಿ.ಎಸ್. ಶಿವರುದ್ರಪ್ಪ, ನೇಮಿಚಂದ್ರ ಮುಂತಾದವರು ಪ್ರಮುಖರು.

**36. ಪ್ರಶ್ನೆಗಳು :**

ಅ) ಪ್ರವಾಸದಿಂದಾಗುವ ಪ್ರಯೋಜನೆಗಳಾವುವು?

ಬ) ಕನ್ನಡ ಸಾಹಿತ್ಯದಲ್ಲಿ ಪ್ರವಾಸ ಕಥನಗಳನ್ನು ರಚಿಸಿದವರು ಯಾರು?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1 X 4 = 4**

37. ರೈತರ ಸಮಸ್ಯೆಗಳು

ಅಥವಾ

ಸಮೂಹ ಮಾಧ್ಯಮದಲ್ಲಿ ದೂರದರ್ಶನದ ಪಾತ್ರ

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1 X 5 = 5**

38. ನೀವು ನಿಮ್ಮ ಶಾಲೆಯಲ್ಲಿ ರಾಜ್ಯೋತ್ಸವದ ಕುರಿತು ನಿಮ್ಮ ಗೆಳೆಯ/ಗೆಳತಿಗೆ ಒಂದು ಪತ್ರವನ್ನು ಬರೆಯಿರಿ

ಅಥವಾ

ನಿಮ್ಮನ್ನು ತುಮಕೂರಿನ ರಾಜೇಶ / ರಾಜಶ್ರೀ 10 ನೇ ತರಗತಿ ಸರಕಾರಿ ಪ್ರೌಢಶಾಲೆ ರಾಮನಗರ ಎಂದು ಭಾವಿಸಿ 10 ನೇ ತರಗತಿಯ ವರ್ಗಾವಣೆ ಕೋರಿ ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೆ ಒಂದು ಪತ್ರ ಬರೆಯಿರಿ.

* * * * *

## ಮಾದರಿ ಪ್ರಶ್ನೆಪತ್ರಿಕೆ 03

**ವಿಷಯ : ದ್ವಿತೀಯ ಭಾಷೆ – ಕನ್ನಡ** **ವಿಷಯ ಸಂಕೇತ : 33–K**

**ಅವಧಿ : 3 ಗಂಟೆ** **ಗರಿಷ್ಟ ಅಂಕಗಳು : 80**

---

**ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು:**

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ 38 ಪ್ರಶ್ನೆಗಳನ್ನು ಹೊಂದಿದೆ.
2. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

---

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **4 X 1 = 4**

1) 'ಪರಹಿತ' ಪದದ ವಿರುದ್ಧ ಪದ
   ಎ) ಸಹಿತ ಬಿ) ಸ್ವಹಿತ ಸಿ) ಪರಹಿತರ ಡಿ) ಪರರಹಿತ
2) 'ಬ್ರಹ್ಮ' ಈ ಪದದ ತದ್ಭವ ರೂಪ
   ಎ) ಬೊಮ್ಮ ಬಿ) ಜನ್ಮ ಸಿ) ಸಂಸ್ಕೃತ ಡಿ) ಜನ್ಮ
3) 'ನಾನೊಂದು' ಇದು ಯಾವ ಸಂಧಿಗೆ ಸಂಭಂದಿಸಿದ ಪದ
   ಎ) ಆಗಮಸಂಧಿ ಬಿ) ಆದೇಶಸಂಧಿ ಸಿ) ಲೋಪಸಂಧಿ ಡಿ)ಸವರ್ಣದೀರ್ಘಸಂಧಿ
4) 'ರೇವು' ಪದದ ಸಮನಾರ್ಥಕ ಪದ
   ಎ) ಹಡಗು ಬಿ) ದೋಣಿ ಸಿ) ಬಂದರು ಡಿ) ಸಮುದ್ರ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **12 X 1 = 12**

5) ಅಸಿ–ಮಸಿ ಎಂದರೇನು?
6) ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಏನೆಂದು ಖ್ಯಾತರಾಗಿದ್ದಾರೆ?
7) ಸಸ್ತನಿಗಳ ಆಶ್ರಯದಾಣಗಳು ಯಾವುವು?
8) ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು?
9) ಗೋಪಾಲನ ಬೆಳಗಿನ ಮುಖ್ಯ ಕೆಲಸ ಯಾವುದಾಗಿತ್ತು?
10) ಗೋಪಾಲನ ಗೆಳೆಯರ ಹೆಸರೇನು?
11) ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು?
12) ಕೆರೆಗಳು ನಿಷ್ಪ್ರಯೋಜಕ ಆಗುವುದು ಯಾವಾಗ?
13) ತುಂಬಿದ ಕುಣಿಗಲ್ ಕೆರೆಯನ್ನು ಯಾವುದಕ್ಕೆ ಹೋಲಿಸಲಾಗಿದೆ?
14) ಮನಸ್ಸು ಅಳಿಯಾಸೆಗಳ ಸುಳಿಗೆ ಸಿಲುಕಬಾರದು ಏಕೆ?
15) ಕಾಡನ್ನು ಅಲೆದ ಸಿದ್ದಾರ್ಥನಿಗೆ ಹೊಳೆದುದ್ದೇನು?
16) ಮೇಲೇರಿದವರು ತ್ರಿಶಂಕುಗಳು ಆಗುವುದು ಯಾವಾಗ?

**III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **8 X 2 = 16**

17) ಹಕ್ಕಿಗಳು ಗೂಡನ್ನು ಯಾವ ರೀತಿ ಅಲಂಕರಿಸುತ್ತವೆ?
18) ಹಕ್ಕಿ ಗೂಡಿನಲ್ಲಿ ಬದುಕಿನ ಯಾವ ಯಾವ ಅನುಭವಗಳಿವೆ?
19) ಕರ್ಪೂರದ ಕೆಲಸವೇನು? ಅದು ತನ್ನ ಕೆಲಸವನ್ನು ಹೇಗೆ ಪೂರೈಸುತ್ತದೆ?
20) ಶತ್ರು ಬಲಕೆ 'ನಮೋ' ಎಂದು ಉತ್ತರನು ಏಕೆ ಹೇಳಿದನು?
21) ವೈದ್ಯರ ಯಾವ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದವು?
22) ಹಾವನ್ನು ಕಂಡು ವೈದ್ಯರ ತಲೆಯಲ್ಲಿ ಯಾವ ವಿಚಾರಗಳು ಮೂಡಿ ಬಂದವು?
23) ಬಾಳೆಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು?
24) ಕಾದು ನಡೆ ಎಂದ ಅರ್ಜುನನು ಉತ್ತರನನ್ನು ಏಕೆ ಒತ್ತಾಯಿಸಿದನು?

**IV. ಕೆಳಗಿನ ಕವಿ / ಸಾಹಿತಿ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.**

25) ಅ) ಅ. ರಾ. ಮಿತ್ರ **1 X 3 = 3**

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ.** **1 X 3 = 3**

26)ಕಾಲೂರುವ ನೆಲವನ್ನು
ತಿರಸ್ಕರಿಸಿದ ಅವರು
ಆಕಾಶದಲ್ಲಿ ಎಷ್ಟು ಹೊತ್ತು
ಹಾರಾಡುತ್ತಾರೆ
ಮತ್ತೆ ನನ್ನ ಆಸರೆ ಬೇಕೇಬೇಕು.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ. ಲಕ್ಷಣ ಬರೆದು ಸಮನ್ವಯಗೊಳಿಸಿ.** **1 X 3 = 3**

27) ಬಾಳೆಯ ಹಣ್ಣಿನಂತೆ ಬಾಗಿದ ಕುಣಿಗಲ್ ಕೆರೆ

**VII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ.**

28) ಮನಸಿದ್ದರೆ ಮಾರ್ಗ **1 X 3 = 3**
ಅಥವಾ
ಒಕ್ಕಲಿಗ ಒಕ್ಕದಿದ್ದರೆ ಜಗವೆಲ್ಲ ಬಿಕ್ಕುವುದು.

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **5 X 3 = 15**

29) "ಅವರು ಯಾರಿಗೂ ಮೋಸ ವಂಚನೆ ಮಾಡುವವರಲ್ಲ"
30) "ಗೊತ್ತು ಗುರಿಯು ಇಲ್ಲದೆ ಕತ್ತಲಲ್ಲಿ ನಡೆದನು"
31) "ಆ ಗೋಪಾಲ ಕೊಡಬೇಕು ನಾವು ಉಣಬೇಕು"
32) "ವೇದಾಂತವನೋದಿ ಫಲವೇನಯ್ಯ"
33) "ಅದರ ಈಗೀನ ಅವಸ್ಥೆಯನ್ನು ನಾನು ನೋಡಲಾರೆ"

**IX. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1 X 4 = 4**

34) ಕೆಸರೊಳಿದ್ದರು ______________ **ಅಥವಾ** ಒಂದು ಬಾಣಕೆ ______________

______________ ______________

______________ ______________

______________ಸಾರ್ಥಕತೆಗೆ. ______________ ಹೋರಾಡು ಹಗಲಿರುಳು.

**X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 1 X 4 = 4**

35) ಬಾಲಕ ಪುಟ್ಟಯ್ಯ ಹಾರ್ಮೋನಿಯಂ ನುಡಿಸಿದ ಪ್ರಸಂಗವನ್ನು ವಿವರಿಸಿರಿ ?

**ಅಥವಾ**

ಪುಟ್ಟಯ್ಯ ಸಮಾಜಕ್ಕೆ ಮುಡುಪಾದ ಪ್ರಸಂಗವನ್ನು ವಿವರಿಸಿರಿ.

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡುಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ 1 X 4 = 4 (2+2)**

36) ನಮಸ್ತೆ ಎನ್ನುತ್ತೇವೆ. ನಮಸ್ಕಾರ ಎನ್ನುತ್ತೇವೆ. ಆ ರೀತಿ ಹೇಳಿದಾಗ ಎರಡು ಅಂಗೈಗಳನ್ನು ಜೋಡಿಸಿ ಮೇಲೆ ಎತ್ತುತ್ತೇವೆ. ಆ ರೀತಿ ಎತ್ತಿದ್ದರ ಜೊತೆಗೆ ತಲೆಯನ್ನು ಬಾಗಿಸುತ್ತೇವೆ. ಈ ರೀತಿಯ ನಮಸ್ಕಾರ ಮಾಡುವುದರ ಅರ್ಥ ವಿಶೇಷತೆ ಏನೆಂದರೆ ನಾವೆಲ್ಲರೂ ಆತ್ಮ ಸ್ವರೂಪರು. ಆದ್ದರಿಂದ ನಾವೆಲ್ಲ ಅಣ್ಣ–ತಮ್ಮಂದಿರು, ಅಕ್ಕ–ತಂಗಿಯರು, ಆದ ಕಾರಣ ಪರಸ್ಪರವಾಗಿ ಪ್ರೇಮವನ್ನು ಕೊಟ್ಟು– ಪಡೆದು ಬದುಕಬೇಕಾಗಿದೆ. ಏಕೆಂದರೆ ನಾವೆಲ್ಲ ಪ್ರೇಮ ಸ್ವರೂಪರು. ಪ್ರೇಮವೇ ಆತ್ಮದ ನಿಜವಾದ ಸ್ವರೂಪವಾಗಿದೆ. ನಾವು ಪಡೆದಿರುವ ಬೇರೆ ಬೇರೆ ದೇಹಗಳು ಆತ್ಮದ ನಿಜವಾದ ಸ್ವರೂಪವನ್ನು ಅರಿಯಲು ಅಡ್ಡಿಯಾಗಿವೆ. ಈ ಅಡ್ಡಿಯನ್ನು ಆಗಿಂದಾಗ್ಗೆ ಪಕ್ಕಕ್ಕೆ ತಳ್ಳುವುದೇ ನಿಜವಾದ ಈ ನಮಸ್ಕಾರ ವಿಧಿಯ ಉದ್ದೇಶ. ನಾವು ಎರಡು ಕೈ ಜೋಡಿಸಿ ಮಾಡುವ ನಮಸ್ಕಾರದ ಅರ್ಥ. ನಾವು ಯಾರಿಗೆ ನಮಸ್ಕಾರ ಹೋಳುತ್ತೇವೆಯೋ ಅವರು, ನಮಸ್ಕಾರ ಮಾಡಿದಾಗ ನಮಗೂ, ಅವರಿಗೂ ಇದು ನೆನಪಾಗುತ್ತದೆ. ನೆನಪಾಗಬೇಕು. ಎರಡು ಕೈ ಸೇರಿದಾಗ ಚಪ್ಪಾಳೆಯಂತೆ,ಆದರೆ ನಮ್ಮ ನಮಸ್ಕಾರ ಚಪ್ಪಾಳೆಯಲ್ಲ, ಜೋಡಿಸಿದ ಕೈಯನ್ನು ಎತ್ತುವುದು ಆತ್ಮೋದ್ಧಾರ ಎಂದು ನಾವು ತಿಳಿಯಬೇಕಾಗಿದೆ. ಗುರು ಹಿರಿಯರನ್ನು ಕಂಡಾಗ ಗೌರವದಿಂದ ತಲೆಬಾಗಿ ನಮಸ್ಕರಿಸುವುದು ನಮ್ಮ ಸಂಸ್ಕೃತಿಯ ಪ್ರತೀಕ. ಆತ್ಮೋದ್ದಾರದ ಮಾರ್ಗ, ಜೀವನದಲ್ಲಿ ರೂಢಿಸಿಕೊಳ್ಳಬೇಕಾದ ಒಂದು ಮೌಲ್ಯ ಈ ರೀತಿಯ ಜೀವನವನ್ನು ರೂಢಿಸಿಕೊಂಡು ನಮ್ಮ ವ್ಯಕ್ತಿತ್ವವನ್ನು ಇನ್ನಷ್ಟು ಸದೃಢವಾಗಿ ರೂಪಿಸಿಕೊಳ್ಳೋಣ. ನಮ್ಮ ಆತ್ಮೋದ್ದಾರ ನಮ್ಮ ಕೈಯಲ್ಲೇ ಇದೆ.

**ಪ್ರಶ್ನೆಗಳು:**

ಅ) ಆತ್ಮದ ನಿಜವಾದ ಸ್ವರೂಪವನ್ನು ಹೇಗೆ ವಿವರಿಸಬಹುದು?
ಆ) ನಮಸ್ಕಾರದ ಅರ್ಥ ವಿಶೇಷತೆ ಏನು ?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1 X 4 = 4**

37) ಗ್ರಂಥಾಲಯ

**ಅಥವಾ**

ಮಹಾಮಾರಿ ಕೊರೋನಾ ( ಕೋವಿಡ್ 19) ವೈರಸನ್ ಲಕ್ಷಣಗಳು ಹಾಗೂ ತಡೆಗಟ್ಟುವ ಕ್ರಮಗಳು

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1 X 5 = 5**

38) ನಿಮ್ಮನ್ನು ಹಾಸನದ ಸರಕಾರಿ ಪ್ರೌಢ ಶಾಲೆಯ ಅಮೀನಾ / ಅಮರ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಆಚರಣೆ ಕುರಿತು ಧಾರವಾಡದಲ್ಲಿರುವ ನಿಮ್ಮ ಗೆಳೆಯ / ಗೆಳತಿಗೆ ಒಂದು ಪತ್ರ ಬರೆಯಿರಿ.

**ಅಥವಾ**

ನೀವು ಬೆಳಗಾವಿಯ ಸರಕಾರಿ ಪ್ರೌಢಶಾಲೆ, 10 ನೇ ತರಗತಿಯಲ್ಲಿ ಓದುತ್ತಿರುವ ಮುಹಮ್ಮದ / ಭಾರತಿ ಎಂದು ಭಾವಿಸಿ ಕರೋನಾ ಪರೀಕ್ಷೆ ಮಾಡಿಸಿಕೊಂಡ ವರದಿಯನ್ನು ನಿಮ್ಮ ಶಾಲೆಗೆ ಹಾಜರ ಪಡಿಸುವ ವರದಿ ಪತ್ರ ಬರೆಯಿರಿ.

* * * * * *

**ಮಾದರಿ ಪ್ರಶ್ನೆಪತ್ರಿಕೆ 04**

**ವಿಷಯ : ದ್ವಿತೀಯ ಭಾಷೆ – ಕನ್ನಡ** | **ವಿಷಯ ಸಂಕೇತ : 33–K**

**ಅವಧಿ : 3 ಗಂಟೆ** | **ಗರಿಷ್ಟ ಅಂಕಗಳು : 80**

---

**ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು:**

**1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ 38 ಪ್ರಶ್ನೆಗಳನ್ನು ಹೊಂದಿದೆ.**

**2. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.**

**3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.**

**4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.**

---

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **4 X 1 = 4**

1) 'ತಿಮಿರ' ಪದದ ಸಮಾನಾರ್ಥಕ ಪದ

ಎ) ಅಮೀರ  ಬಿ) ಸರೋವರ  ಸಿ) ಬೆಳಕು  ಡಿ) ಕತ್ತಲು

2) 'ಬಣ್ಣ' ಪದದ ತತ್ಸಮ ರೂಪ

ಎ) ವರ್ಣ  ಬಿ) ಬಣ್ಣಗಳು  ಸಿ) ವರ್ಣಗಳು  ಡಿ) ಕಾಮನಬಿಲ್ಲು

3) 'ಪಂಚಾಕ್ಷರಿ' ಈ ಪದದಲ್ಲಿರುವ ಸಂಧಿ

ಎ) ಸ್ವರಲೋಪ  ಬಿ) ಆಗಮ  ಸಿ) ಆದೇಶ  ಡಿ) ಸವರ್ಣದೀರ್ಘ

4) 'ಕರುಣೆ' ಪದದ ವಿರುದ್ಧಾರ್ಥಕ ಪದ

ಎ) ನಿಷ್ಕರುಣೆ  ಬಿ) ಅನುಕರಣೆ  ಸಿ) ಸುಕರಣೆ  ಡಿ) ನಿರಾಕರಣೆ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **12 X 1 = 12**

5) ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು?

6) ಬೇಡನು ಪ್ರಾಣಿಗಳನ್ನು ಕೊಲ್ಲಲು ಮಾಡುತ್ತಿದ್ದ ಉಪಾಯವೇನು?

7) ಈ ನಾಡಿನ ಬೆನ್ನೆಲುಬು ಯಾರು?

8) ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಏನೆಂದು ಖ್ಯಾತರಾಗಿದ್ದಾರೆ?

9) ಸಸ್ತನಿಗಳ ಆಶ್ರಯದಾಣಗಳು ಯಾವುವು?

10) ಗೋಪಾಲನ ಗೆಳೆಯರ ಹೆಸರೇನು?

11) ಏಣಿಯನ್ನು ಬಳಸಿ ಮೇಲೆರಿದವರಿಗೆ ಏಣಿ ಹಾಕುವ ಸವಾಲು ಏನು?

12) ಸಿದ್ಧಾರ್ಥ ಯಾರ ಹಾಗೂ ಯಾವುದರ ಮೋಹವನ್ನು ತೊರೆದನು?

13) ಬುದ್ಧನು ಅರಿತುಕೊಂಡ ಬದುಕಿನ ಸತ್ಯವೇನು?

14) ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಕವಿ ಹೇಳಿದ್ದಾರೆ?

15) ಕುಣಿಗಲ್ ಕೆರೆ ಯಾವ ದಿಕ್ಕಿನಲ್ಲಿದೆ?

16) ಅರ್ಜುನನು ಯಾರನ್ನು ನಾಡನರಿ ಎಂದು ಕರೆದಿದ್ದಾನೆ?

**III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **8X 2 = 16**

17) ಪುಟ್ಟರಾಜರ ವೇಷಭೂಷಣಗಳು ಹೇಗಿದ್ದವು?

18) ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು?

19) ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬ ಪ್ರೀತಿ ಹೇಗೆ ತುಂಬಿಕೊಂಡಿತು?

20) ಸದ್ದು ಮಾಡದೆ ಬಾಳಬೇಕು ಎಂಬುದಕ್ಕೆ ಕವಿ ನೀಡುವ ಹೋಲಿಕೆಗಳಾವವು?

21) ಭಾವ ಬಣ್ಣದ ಸೀರೆಯನ್ನು ತಂದದ್ದು ಏಕೆ?

22) ಒಡಲು ಒಡೆವಂತೆ ಅರ್ಜುನನು ಮನದಲಿ ನಗಲು ಕಾರಣವೇನು?

23) ಕಳ್ಳರ ಗುರುವಿನ ಮನಃ ಪರಿವರ್ತನೆ ಹೇಗಾಯಿತು?

24) ಭೀಮನಾಯಕನು ವೈದ್ಯರಿಗೆ ಏನೆಂದು ಕೃತಜ್ಞತೆಗಳನ್ನು ಸಲ್ಲಿಸಿದನು?

**IV. ಕೆಳಗಿನ ಕವಿ / ಸಾಹಿತಿ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.**

25. ಅ.ರಾ.ಮಿತ್ರ **1 X 3 = 3**

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ.** **1 X 3 = 3**

26) ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲು
ದೀಪದೆದುರಿಗೆ ತಿಮಿರ ಸರಿಯುವಂತೆ
ಶಾಂತಿಯಲಿ ಬದುಕಿನೀ ಕರ್ತವ್ಯವನು ಮುಗಿಸು;
ಕೂಗಾಡಿ, ಹಾರಾಡಿ ಫಲವದೇನು?

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ. ಲಕ್ಷಣ ಬರೆದು ಸಮನ್ವಯಗೊಳಿಸಿ.** **1 X 3 = 3**

27) ವನಜಮುಖಿ

**VII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ.**

28) "ಕೈ ಕೆಸರಾದರೆ ಬಾಯಿ ಮೊಸರು" **1 X 3 = 3**

**ಅಥವಾ**

"ಪೆನ್ನು ಖಡ್ಗಕ್ಕಿಂತ ಹರಿತ"

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **5 X 3 = 15**

29) "ಅವರು ಯಾರಿಗೂ ಮೋಸ ವಂಚನೆ ಮಾಡುವವರಲ್ಲ"

30) " ಮಗು ಇಂದಿನಿಂದ ಇದು ನನ್ನ ಹಾರ್ಮೋನಿಯಮ್ ಅಲ್ಲ"

31) "ಹುಟ್ಟಿದ ಮಕ್ಕಳಿಗೆ ಬದುಕಿನ ಪಾಠ ಹೇಳುವ ಶಾಲೆ ಅದು"

32) "ಇವರಿಗೆ ಭಾರ ಹೊತ್ತವರ ಕಾಳಜಿಯೇ ಇಲ್ಲ"

33) "ಬೊಬ್ಬೆ ಹೊಡೆದಾವೆ ಬಾಳೆ ಮೀನು"

**IX. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1 X 4 = 4**

34) ನೀರ ಕಂಡಲ್ಲಿ ______________
______________________
______________________
__________ಕೂಡಲಸಂಗಮದೇವ.

**ಅಥವಾ**

ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ
______________________
______________________
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನ.

**X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 1 X 4 = 4**

35) ಗೋಪಾಲ ಮತ್ತು ಬನದ ಗೋಪಾಲನ ನಡುವೆ ನಡೆದ ಸಂಭಾಷಣೆ ಏನು?

**ಅಥವಾ**

ನನ್ನ ಗೋಪಾಲ ಪಾಠದಲ್ಲಿ ಪ್ರಕೃತಿಯನ್ನು ಹೇಗೆ ವರ್ಣಿಸಲಾಗಿದೆ?

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡುಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ 1 X 4 = 4 (2+2)**

ಒಂದು ಭಾಷೆ ಸತ್ವಪೂರ್ಣವಾಗಬೇಕಾದರೆ ಅದನ್ನಾಡುವ ಜನ ಅಭಿಮಾನಧನರೂ, ಬುದ್ಧಿಶಾಲಿಗಳು, ಪ್ರಯೋಗಶೀಲರೂ ಆಗಿರಬೇಕು. ನಾಲ್ಕೈದು ಶತಮಾನಗಳ ಹಿಂದೆ ಆಂಗ್ಲಭಾಷೆ ಯುರೋಪಿನ ಸಾಮಾನ್ಯ ಭಾಷೆಗಳಲ್ಲಿ ಒಂದಾಗಿತ್ತು. ಆಂಗ್ಲ ಜನತೆ ಸಾಹಸ ಜೀವಿಯಾಯಿತು, ಬುದ್ಧಿಶಾಲಿಯಾಯಿತು, ಸೂರ್ಯನು ಎಂದೂ ಮುಳುಗನ್ನೆನ್ನುವಂತಹ ವಿಸ್ತಾರವಾದ ಸಾಮ್ರಾಜ್ಯವನ್ನು ಸ್ಥಾಪಿಸಿತು. ದೇಶ ವಿದೇಶಗಳ ಭಾಷೆ ಹಾಗೂ ಸಾಹಿತ್ಯ ಸಂಸ್ಕೃತಿಯನ್ನು ಆಂಗ್ಲ ಪಂಡಿತರು ಮುಕ್ತಮನಸ್ಸಿನಿಂದ ಅಭ್ಯಸಿಸಿದರು. ತನ್ಮೂಲಕ ತಮ್ಮ ಭಾಷೆ ಮತ್ತು ಸಾಹಿತ್ಯವನ್ನು ಹಿಗ್ಗಿಸಿದರು,ಅರಳಿಸಿದರು.ಎಲ್ಲಕ್ಕೂ ಮೇಲಾಗಿ ಮಹಾಮೇಧಾವಿಗಳು ತಮ್ಮ ಆಸೆ, ಆಕಾಂಕ್ಷೆ, ವಿಚಾರ ಮುಂತಾದುವನ್ನು ಆ ಭಾಷೆಯ ಮುಖಾಂತರವಾಗಿಯೇ ಹೇಳಬೇಕೆಂಬ ಉಜ್ವಲ ಅಭಿಮಾನವುಳ್ಳವರಾಗಿದ್ದರು. ಆಂಗ್ಲ ವಿಜ್ಞಾನಿಗಳು, ರಾಜಕಾರಣಿಗಳು, ಅರ್ಥಶಾಸ್ತ್ರಜ್ಞರು ಹೀಗೆ ಎಲ್ಲರೂ ತಮ್ಮ ಭಾಷೆಯನ್ನೇ ಬಳಸಿದುದರ ಪರಿಣಾಮವಾಗಿ ಆಭಾಷೆ ಬೆಳೆದು ಇಂದು ಪ್ರಪಂಚದ ದೊಡ್ಡ ಭಾಷೆಗಳಲ್ಲಿ ಒಂದಾಗಿದೆ. ಇದಕ್ಕೆಲ್ಲ ಆಂಗ್ಲ ಜನರ ಸಂಕಲ್ಪ, ಕೃಷಿ ಕಾರಣವೆಂದು ಬೇರೆ ಹೇಳಬೇಕಿಲ್ಲ.

**36) ಪ್ರಶ್ನೆಗಳು :**

ಅ) ಭಾಷೆ ಸತ್ವಪೂರ್ಣವಾಗಿ ವಿಕಾಸಗೊಳ್ಳುವುದು ಯಾವಾಗ?

ಆ) ಆಂಗ್ಲಭಾಷೆ ವಿಶ್ವವ್ಯಾಪಿಯಾಗಲು ಕಾರಣವೇನು?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1 X 4 = 4**

37) ಆನ್‌ಲೈನ್ ಶಿಕ್ಷಣದ ಪೂರಕ ಹಾಗೂ ಮಾರಕಗಳು

**ಅಥವಾ**

ರಾಷ್ಟ್ರೀಯ ಹಬ್ಬಗಳು

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1 X 5 = 5**

38) ನಿಮ್ಮನ್ನು ಬೀದರಿನ ಸರ್ಕಾರಿ ಪ್ರೌಢಶಾಲೆಯ 'ಮಹೇಶ' ಎಂದು ಭಾವಿಸಿಕೊಂಡು, ಊರಿನ ಬೀದಿ ದೀಪಗಳನ್ನು ಸರಿಪಡಿಸುವಂತೆ ಕೋರಿ ನಗರ ಸಭೆಯ ಅಧ್ಯಕ್ಷರಿಗೊಂದು ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಬೆಂಗಳೂರಿನ ಸರ್ಕಾರಿ ಪ್ರೌಢಶಾಲೆಯ 'ಸುಮಲತಾ' ಎಂದು ಭಾವಿಸಿಕೊಂಡು ಶಾಲೆಯಲ್ಲಿ ಆಚರಿಸಿದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದ ವಿವರವನ್ನು ತಿಳಿಸಿ ಧಾರವಾಡದ ಸಾಧನಕೇರಿಯ ನಿವಾಸಿಯಾದ 'ಮಮತಾ' ಎಂಬ ಗೆಳತಿಗೆ ಪತ್ರವನ್ನು ಬರೆಯಿರಿ.

* * * * *

## ಮಾದರಿ ಉತ್ತರಪತ್ರಿಕೆ 01

**I.** **ಬಹು – ಆಯ್ಕೆ ಪ್ರಶ್ನೆ ( ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** **4X 1 = 4**

1. 'ಮೂಡಣ' ಈ ಪದದ ಅರ್ಥ
ಎ) ಪೂರ್ವ
2. 'ಜನ್ಮ' ಪದದ ತದ್ಭವ ರೂಪ
ಕ) ಜನುಮ
3. 'ಜೀವೋಲ್ಲಾಸ' ಪದದ ಸಂಧಿಯ ರೂಪ
ಡ) ಗುಣ
4. 'ಆಸಕ್ತಿ' ಪದದ ವಿರುದ್ದಾರ್ಥಕ ರೂಪ
ಬಿ) ಅನಾಸಕ್ತಿ

**II.** **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ :** **12 X 1 = 12**
**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)**

5. ಗಿಳಿಯ ತತ್ವನಿಷ್ಠೆಯ ಗುಣವನ್ನು ಇಂದ್ರನು ಮೆಚ್ಚಿಕೊಂಡನು.
6. ಅಸಿ ಎಂದರೆ ಯುದ್ಧ (ಸೈನಿಕ) ಮಸಿ ಎಂದರೆ ಸಾಹಿತ್ಯ ರಚನೆ.
7. ಶ್ರೇಷ್ಠ ಗುರುವಿನಲ್ಲಿ ಶಿಷ್ಯರ ಮನಸನ್ನು ಓದಬಲ್ಲ ಶಕ್ತಿ ಇರುತ್ತದೆ.
8. ಕೃಷಿಕ ಈ ನಾಡಿನ ಬೆನ್ನೆಲುಬು.
9. ಗೋಪಾಲನ ಬೆಳಗಿನ ಮುಖ್ಯ ಕೆಲಸ ಬೆಳಗಿನ ಪೂಜೆಗೆ ಹೂವು ತರುವುದು.
10. ರಾಮು, ಕಿಟ್ಟಿ, ನಾಣಿ, ಮಾಧು ಇವರು ಗೋಪಾಲನ ಗೆಳೆಯರು.
11. ಏಣಿ ಜನರಿಗೆ ಮೇಲೇರಲು ಸಹಾಯ ಮಾಡಿತು.
12. ನಮ್ಮ ಕರ್ತವ್ಯಗಳನ್ನು ಶಾಂತಿಯಿಂದ ಮುಗಿಸಬೇಕೆಂದು ಕವಿ ಹೇಳಿದ್ದಾರೆ
13. ಕುಣಿಗಲ್ ಕೆರೆಯ ಆಕಾರವನ್ನು ಬಾಳೆಯ ಹಣ್ಣಿಗೆ ಹೋಲಿಸಲಾಗಿದೆ
14. ಕುಣಿಗಲ್ ಕೆರೆಯು ಪೂರ್ವ ದಿಕ್ಕಿನಲ್ಲಿದೆ.
15. ಧನವಿದ್ದವರಲ್ಲಿ ಇರಬೇಕಾದ ಗುಣ ದಯೆ.
16. ಅರ್ಜುನನು ಉತ್ತಕುಮಾರನನ್ನು ನಾಡನರಿ ಎಂದು ಕರೆದಿದ್ದಾನೆ.

**III.** **ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **8 X 2 = 16**
**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು)**

17. " ಈ ಮರ ಮೊದಲಿನಂತೆ ಹಸಿರಿನಿಂದ, ಫಲಪುಷ್ಪಗಳಿಂದ ಕಂಗೊಳಿಸಬೇಕು. ಮೊದಲಿನ ಹಾಗೆ ನೆರಳು ಕೊಡುವಂತೆ ವರವನ್ನು ದಯಪಾಲಿಸು" ಎಂದು ಕೇಳಿತು.

18. ಪುಟ್ಟರಾಜರು ಅಷ್ಟಾಧ್ಯಾಯಿ ಶರ್ಮವರ್ಮರ 'ಕಾತಂತ್ರ', ಕೇಶಿರಾಜನ 'ಶಬ್ದಮಣಿ ದರ್ಪಣ', ನಿಜಗುಣ ಶಿವಯೋಗಿಗಳ 'ಕೈವಲ್ಯ ಪದ್ಧತಿ' ಜೊತೆಗೆ ತರ್ಕಶಾಸ್ತ್ರ, ನ್ಯಾಯಶಾಸ್ತ್ರ, ಶಬ್ದಾನುಶಾಸ್ತ್ರ, ಛಂದಶಾಸ್ತ್ರ ಹಾಗೂ ಕನ್ನಡ ವ್ಯಾಕರಣಗಳಲ್ಲಿ ನಿಷ್ಣಾತರಾದವರು.

19. "ಬಿಳಿಯ ಉದ್ದನೆಯ ಅಂಗಿ, ಪಂಚೆ, ತಲೆಯ ಮೇಲೆ ಅಂದವಾಗಿ ಸುತ್ತಿದ ಕಾವಿಬಣ್ಣದ ಪೇಠ, ಹಣೆಯಲ್ಲಿ ವಿಭೂತಿ, ಹುಬ್ಬುಗಳೆರಡರ ನಡುವೆ ಗಂಧದ ಬೊಟ್ಟು, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಕೈಯಲ್ಲೊಂದು ಊರುಗೋಲು".

20. ಸಾಗರದ ದ್ವೀಪ, ಗಿರಿಶಿಖರದ ನೆತ್ತಿ, ನಿಬೀಡ ವನಶ್ರೇಣಿ, ಕಗ್ಗತ್ತಲ ಕಣಿವೆ, ಶೀತಲ ಧ್ರುವಪ್ರದೇಶ ಹೀಗೆ ಹಕ್ಕಿಗಳು ತಮ್ಮ ಗೂಡನ್ನು ಎಲ್ಲೆಲ್ಲೂ ಕಟ್ಟಿಕೊಳ್ಳಬಲ್ಲವು.

21. ಕುಣಿಗಲ್ ಕೆರೆ ನೋಡುವವರ ಕಣ್ಣಿಗೆ ವೈಭವವನ್ನು ನೀಡುತ್ತದೆ. ಕುಣಿಗಲ್ ಕೆರೆ ಬಾಳೆಯ ಹಣ್ಣಿನಂತೆ ಬಾಗಿದಂತೆ ಕಾಣುತ್ತದೆ. ತುಂಬಿದ ಕುಣಿಗಲ್ ಕೆರೆ ನಿಂಬೆಯ ಹಣ್ಣಿನಂತೆ ಕಾಣುತ್ತದೆ.

22. ಕೌರವನ ಸೈನ್ಯವನ್ನು ನೋಡಿ 'ಭೂಮಿಯೇ ಈ ಸೈನ್ಯಕ್ಕೆ ಜನ್ಮ ನೀಡಿದೆಯೇನೋ' ಎನಿಸುತ್ತದೆ. ಈ ಸೈನ್ಯವನ್ನು ಸೋಲಿಸಲು ಶಿವನಿಗೆ ಮಾತ್ರ ಸಾಧ್ಯ. ನಮಗಂತೂ ಸಾಧ್ಯವೇ ಇಲ್ಲ' ಎಂದು ಎನಿಸಿ ಉತ್ತರನು 'ನಮೋ' ಎಂದನು

23."ಕಾಯುವುದು ದೇವರ ಕೆಲಸ, ಕೊಲ್ಲುವುದು ರಾಕ್ಷಸರ ಕೆಲಸ" ಎಂಬ ವೈದ್ಯರು ನುಡಿದರು. ಈ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದವು.

24. ವೈದ್ಯರು ಮಗುವಿನ ನಾಡಿ ಹಿಡಿದು, ಜ್ವರದ ರೀತಿ ಪರೀಕ್ಷಿಸಿದರು. ವೈದ್ಯರು ತಾವೇ ಕಾಡಿಗೆ ಹೋಗಿ ಕಷ್ಟದಿಂದ ಸೊಪ್ಪನ್ನು ಹುಡುಕಿ ತಂದು ರಸಮಾಡಿ, ಆ ರಸದೊಂದಿಗೆ ಮತ್ತೊಂದು ಸಲ ಔಷಧಿಯನ್ನು ಕುಡಿಸಿದರು. ಕುಪ್ಪೆಯಲ್ಲಿದ್ದ ಒಂದು ಲೇಹವನ್ನು ಹಣೆಯ ತುಂಬ ಬಳಿದರು. ಹೀಗಾಗಿ ಭೀಮನಾಯಕನ ಮಗುವಿನ ಜ್ವರ ಕಡಿಮೆಯಾಗಿ, ಪ್ರಾಣ ಉಳಿಯಿತು.

**IV. ಕೆಳಗಿನ ಕವಿ / ಸಾಹಿತಿ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು.**

25. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು **ಜನ್ಮ ಸ್ಥಳ, ಕಾಲ =01**
**ಕೃತಿಗಳು, ಪ್ರಶಸ್ತಿ = 01**
**ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ = 01**

ಡಾ.ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು 1951ರಲ್ಲಿ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಹೆಡಿಯಾಲ ಗ್ರಾಮದಲ್ಲಿ ಜನಿಸಿದರು. ಇವರ ಕೃತಿಗಳು– 'ಜೀವನ ದರ್ಶನ', 'ಕೈ ದೀವಿಗೆ', 'ಸಮಾಧಿಯ ಮೇಲೆ', 'ಕಾಯಕ ದಾಸೋಹ, ಇತ್ಯಾದಿ. ಇವರಿಗೆ ರಾಜ್ಯೋತ್ಸವ ಪ್ರಶಸ್ತಿ, ಪಾಲ್ ಹ್ಯಾರಿಸ್ ಪ್ರಶಸ್ತಿ, ಗೌರವ ಡಾಕ್ಟರೇಟ್ ಪುರಸ್ಕಾರ ದೊರೆಕಿವೆ. ಇವರನ್ನು 'ರಂಗ ಜಂಗಮ' ಎಂದು ಕೂಡ ಕರೆಯುತ್ತಾರೆ.

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯುವುದು.**

**ಪಾಠ್ಯಾಂಶಕ್ಕೆ =02**
**ಪದ ಬಳಕೆ ಮತ್ತು ಶೈಲಿ = 01**

26. ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನ.

**ಉತ್ತರ :**12ನೇ ಶತಮಾನದಲ್ಲಿದ್ದ ಮಹಾಶಿವಶರಣೆ ಅಕ್ಕ ಮಹಾದೇವಿಯವರು ತಮಗೆ ಚನ್ನಮಲ್ಲಿಕಾರ್ಜುನನ ಬಗ್ಗೆ ಇರುವ ಭಕ್ತಿಯ ಬಗ್ಗೆ ತಿಳಿಸುತ್ತಾ, ಮರ ಇದ್ದ ಮೇಲೆ ನೆರಳು ಇಲ್ಲದಿದ್ದರೆ, ಹಣವಿದ್ದು(ಸಂಪತ್ತು) ದಯೆ ಇಲ್ಲದಿದ್ದರೆ, ಹಸುವಿದ್ದು ಹಾಲನ್ನು ಕೊಡದೆ ಇದ್ದರೆ, ಮನುಷ್ಯನಿಗೆ ರೂಪವಿದ್ದು ಗುಣವಿಲ್ಲದಿದ್ದರೆ, ತಟ್ಟೆಯಿದ್ದು ಊಟವಿಲ್ಲದ ಹಾಗಿದ್ದರೆ ಚನ್ನಮಲ್ಲಕಾರ್ಜುನನ ಜ್ಞಾನವಿಲ್ಲದಿದ್ದರೆ ನಾನಿದ್ದು ಫಲವಿಲ್ಲ ಎಂದು ಅಕ್ಕಮಹಾದೇವಿ ಹೇಳಿದ್ದಾರೆ.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸುವುದು :**

27. "ಬಾಳೆಯ ಹಣ್ಣಿನಂತೆ ಬಾಗಿದ ಕುಣಿಗಲ್ ಕೆರೆ" **ಅಲಂಕಾರವನ್ನು ಹೆಸರಿಸುವುದು = 01**

**ಲಕ್ಷಣ ಮತ್ತು ಸಮನ್ವಯಗೊಳಿಸುವುದು = 02**

**ಉತ್ತರ :** ಅಲಂಕಾರದ ಹೆಸರು : ಉಪಮಾಲಂಕಾರ

ಲಕ್ಷಣ : ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದನ್ನು ಉಪಮಾಲಂಕಾರ ಎನ್ನುತ್ತೇವೆ.

ಉಪಮೇಯ : ಕುಣಿಗಲ್ ಕೆರೆ

ಉಪಮಾನ : ಬಾಳೆಯ ಹಣ್ಣು

ಉಪಮಾವಾಚಕ : ಅಂತೆ

ಸಮಾನಧರ್ಮ : ಬಾಗಿರುವುದು

ಸಮನ್ವಯ : ಇಲ್ಲಿ ಕುಣಿಗಲ್ ಕೆರೆ ಎಂಬ ಉಪಮೇಯವನ್ನು, ಬಾಳೆಯ ಹಣ್ಣು ಎಂಬ ಉಪಮಾನದ ಮೂಲಕ ಬಾಗಿದೆ ಎಂಬ ಸಮಾನಧರ್ಮವನ್ನು ಹೇಳಿ ಪರಸ್ಪರ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರದ ಉದಾಹರಣೆಯಾಗಿದೆ.

**VII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ.**

28. "ಕಾಯಕವೇ ಕೈಲಾಸ" **ಗಾದೆಯ ಮಹತ್ವದ ವಿವರಣೆ = 01**

**ಅಥವಾ** **ಉದಾಹರಣೆಯೊಂದಿಗೆ ಅರ್ಥ ವಿವರಣೆ = 01**

"ಹಕ್ಕಿಗಳಿಗೆ ಗೂಡು ಮಕ್ಕಳಿಗೆ ತಾಯಿ" **ಭಾಷಾಶೈಲಿಗೆ–ಪದಬಂಧಗಳಿಗೆ = 01**

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.**

**ಕೃತಿ, ಕರ್ತೃ, ಪಠ್ಯದ ಹೆಸರು = 01**

**ಯಾರು–ಯಾರಿಗೆ ಸಂದರ್ಭ = 01**

**ಭಾಷಾಶೈಲಿಗೆ–ಪದಬಂಧಗಳಿಗೆ = 01**

**29. "ಏನಾದರೂ ವರವನ್ನು ಕೇಳು ಕೊಡುತ್ತೇನೆ"**

ಉತ್ತರ : **"ಏನಾದರೂ ವರವನ್ನು ಕೇಳು ಕೊಡುತ್ತೇನೆ"** ಈ ವಾಕ್ಯವನ್ನು ಅ.ರಾ.ಮಿತ್ರರವರು ಬರೆದ 'ಮಹಾಭಾರತ ಪಾತ್ರ ಸಂಗತಿಗಳು' ಪುಸ್ತಕದ 'ಒಣಮರದ ಗಿಳಿ' ಎಂಬ ಪಾಠದಿಂದ ಆರಿಸಲಾಗಿದೆ. ಈ ಮಾತನ್ನು ಇಂದ್ರನು ಗಿಳಿಗೆ ಕೇಳಿದನು. ಬೇಡನು ಬಿಟ್ಟ ವಿಷದ ಬಾಣದಿಂದ ಮರ ಒಣಗಿತು. ಅದರ ಹಸಿರಿನ ಸಮೃದ್ಧಿ ಫಲಸಮೃದ್ಧಿ ಮಾಯವಾದವು. ಬಹು ಕಾಲದಿಂದ ಆ ಮರದ ಮೇಲೆ ಒಂದು ಗಿಳಿ ವಾಸವಾಗಿತ್ತು. ಮರ ಒಣಗಿ ನಿಂತರೂ ಗಿಳಿ ಆ ಮರವನ್ನು ಬಿಟ್ಟು ಹೋಗದೆ ಅಲ್ಲೇ ಇತ್ತು. ಇದನ್ನು ನೋಡಿದ ಇಂದ್ರನು ಆಶ್ಚರ್ಯವಾದ ಸಂದರ್ಭದಲ್ಲಿ ಮೇಲಿನ ವಾಕ್ಯ ಬಂದಿದೆ.

**30. "ಅಮ್ಮನ ಮಾತು ಸುಳ್ಳಾಗಲಾರದು"**

ಉತ್ತರ : "ಅಮ್ಮನ ಮಾತು ಸುಳ್ಳಾಗಲಾರದು" ಈ ವಾಕ್ಯವನ್ನು ಕುವೆಂಪು ಅವರು ಬರೆದ 'ನನ್ನ ಗೋಪಾಲ' ಪಾಠದಿಂದ ಆರಿಸಲಾಗಿದೆ. ಈ ಮಾತನ್ನು ಗೋಪಾಲನು ತನ್ನ ಮನಸ್ಸಿನಲ್ಲಿಯೇ ಹೇಳಿಕೊಳ್ಳುತ್ತಾನೆ. ಗೋಪಾಲನ ತಾಯಿ ಗೋಪಾಲನಿಗೆ ಶಾಲೆಯಿಂದ ಬರುವಾಗ ಭಯವಾದರೆ ನಿನ್ನ ಅಣ್ಣ ಗೋಪಾಲನನ್ನು ಕರೆ ಎಂದು ಹೇಳುತ್ತಾಳೆ. ಗೋಪಾಲ ಶಾಲೆಯಿಂದ ಬರುವಾಗ ಸಂಜೆ ಆಗುತ್ತದೆ. ತಕ್ಷಣ ಗೋಪಾಲಣ್ಣ ಎಂದು ಕೂಗಿದ. ಅದಕ್ಕೆ ಉತ್ತರವೇ ಇಲ್ಲ. ಆದರೆ ಅಮ್ಮ ಹೇಳಿದ್ದಾಳೆ ಇಲ್ಲಿಯೇ ಗೋಪಾಲಣ್ಣ ಇರುತ್ತಾನೆಂದು ಅಂದುಕೊಳ್ಳುವಾಗ ಈ ಮೇಲಿನ ವಾಕ್ಯ ಬಂದಿದೆ.

**31. "ಅವಕಾಶ ಮತ್ತು ಅದೃಷ್ಟಕ್ಕೆ ತಮ್ಮ ಸಂತತಿಯ ಉಳಿವನ್ನು ಒಡ್ಡುತ್ತವೆ."**

ಉತ್ತರ : "ಅವಕಾಶ ಮತ್ತು ಅದೃಷ್ಟಕ್ಕೆ ತಮ್ಮ ಸಂತತಿಯ ಉಳಿವನ್ನು ಒಡ್ಡುತ್ತವೆ." ಈ ವಾಕ್ಯವನ್ನು ಬಿ. ಎಸ್. ಕೃಪಾಕರ ಮತ್ತು ಸೇನಾನಿ ಹಾಗೂ ಶ್ರೀ ಕೆ, ಪುಟ್ಟಸ್ವಾಮಿ ಅವರ ಜೊತೆಗೂಡಿ ರಚಿಸಿದ ಜೀವಜಾಲ ಕೃತಿಯಿಂದ ಆರಿಸಲಾದ 'ಹಕ್ಕಿ ಗೂಡುಗಳ ನಿಗೂಢ ಜಗತ್ತು' ಎಂಬ ಪಾಠದಿಂದ ಆರಿಸಲಾಗಿದೆ. ಕೋಟ್ಯಂತರ ವರ್ಷಗಳ ವಿಕಾಸ ಕ್ರಿಯೆಯಲ್ಲಿ ಬೆನ್ನುಮೂಳೆಯ ಪ್ರಾಣಿಗಳು ಎರಡು ವಿಧದಲ್ಲಿ ಸಂತಾನೋತ್ಪತ್ತಿ ಮಾಡುತ್ತಾ ಬಂದಿವೆ. ಮೀನು, ಕಪ್ಪೆ ಮತ್ತು ಸರೀಸೃಪಗಳಂತಹ ಪ್ರಾಣಿಗಳು ಏಕಕಾಲದಲ್ಲಿ ಅಸಂಖ್ಯಾತ ಮೊಟ್ಟೆಗಳನಿಡುತ್ತವೆ. ಆದರೆ ಅವುಗಳ ರಕ್ಷಣೆ ಪೋಷಣೆ ಮಾಡುವುದಿಲ್ಲ. ಅಂತಹ ಮೊಟ್ಟೆಗಳು ಉಳಿಯುವ ಅವಕಾಶ ಸಿಕ್ಕರೆ, ಅದೃಷ್ಟವಿದ್ದರೆ ಮಾತ್ರ ಮರಿಯಾಗಿ ಹೊರಬರುತ್ತದೆ. ಆದರೆ ಪಕ್ಷಿಗಳು ಹಾಗಲ್ಲ. ಕಡಿಮೆ ಸಂತತಿಗೆ ಜನ್ಮ ನೀಡಿ, ಅವುಗಳಿಗೆ ಲಾಲನೆ ಪೋಷಣೆ ಮಾಡಿ, ಬದುಕಿನ ಪಾಠ ಹೇಳಿಕೊಡುತ್ತವೆ. ಎಂದು ಈ ಮಾತಿನಲ್ಲಿ ಹೇಳಲಾಗಿದೆ.

**32. "ನಾನೂ ನೋಡುತ್ತೇನೆ ಹೇಗೆ ಇಳಿಯುತ್ತಾರೆಂದು"**

ಉತ್ತರ : "ನಾನೂ ನೋಡುತ್ತೇನೆ ಹೇಗೆ ಇಳಿಯುತ್ತಾರೆಂದು" ಈ ವಾಕ್ಯವನ್ನು ಸುಕನ್ಯಾ ಮಾರುತಿಯವರು ಬರೆದ 'ಏಣಿ' ಎಂಬ ಪದ್ಯದಿಂದ ಆರಿಸಲಾಗಿದೆ. 'ಏಣಿ'ಯು ಈ ಮಾತನ್ನು ಹೇಳುತ್ತದೆ. ಏಣಿಯು . ಎಷ್ಟೊಂದು ಜನರನ್ನು ಮೇಲಕ್ಕೆ ಎತ್ತಿಹಿಡಿದಿದೆ. ಆದರೆ ಲೀಲಾಜಾಲವಾಗಿ ಮೇಲೇರಿದವರಿಗೆ ಭಾರ ಹೊತ್ತವರ ಕಾಳಜಿಯಿಲ್ಲ. ಅವರ ಒಂದೊಂದು ಹೆಜ್ಜೆಯ ಭಾರ ಹೊರುವ ಕಷ್ಟ ಏಣಿಗೆ ಮಾತ್ರ ಗೊತ್ತು. ಆದರೆ ಆನೆಯ ಭಾರ ಹೊತ್ತು ಗಟ್ಟಿ ನೆಲದಲ್ಲಿ ಕಾಲೂರಿನಿಂತ ತನಗೆ ಬೀಳುವ ಭಯವಿಲ್ಲ ಎಂದು ಏಣಿ ಹೇಳುತ್ತದೆ. ಹಣ, ಅಂತಸ್ತು, ಅಧಿಕಾರಿಗಳು ದೊರೆತ ನಂತರ ವ್ಯಕ್ತಿಗಳಲ್ಲಿ ಆಗುವ ಬದಲಾವಣೆಗಳನ್ನು ಏಣಿಯ ಈ ಮಾತು ಪ್ರತಿಬಿಂಬಿಸುತ್ತದೆ

**33. "ಸಿಡುಕು ಮಿಡುಕನು ತೊರೆದು ಮೌನಿಯಾಗು"**

ಉತ್ತರ : **"ಸಿಡುಕು ಮಿಡುಕನು ತೊರೆದು ಮೌನಿಯಾಗು"**ಈ ವಾಕ್ಯವನ್ನು ಸಿ.ಪಿ.ಕೆಯವರು ಬರೆದ ಬೊಗಸೆ ಎಂಬ ಕವನಸಂಕಲನದಿಂದ ಆರಿಸಲಾದ 'ಸದ್ದು ಮಾಡದಿರು' ಪದ್ಯದಿಂದ ಆರಿಸಲಾಗಿದೆ. ಎಲ್ಲರೂ ತಮ್ಮ ತಮ್ಮ ಕರ್ತವ್ಯವನ್ನು ಮೌನವಾಗಿ ಮಾಡಬೇಕು. ಹಸಿಸೌದೆ ಸರಿಯಾಗಿ ಉರಿಯದೆ ಬುಸುಗುಡುವಂತೆ, ಬೆಂಕಿ ತಗುಲಿದ ಮದ್ದು ಸಿಡಿಯುವಂತೆ, ಕರ್ತವ್ಯವನ್ನು ಮಾಡುವಾಗ ಕೋಪತಾಪ, ಸಿಡುಕುಗಳು ಇರಬಾರದು ಎನ್ನುವುದನ್ನು ಈ ಮಾತಿನಲ್ಲಿ ಹೇಳಲಾಗಿದೆ.

**IX. ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು**

**(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ನಾಲ್ಕು ಅಂಕಗಳು).** **1 X 4 = 4**

34. ಏಕಾಂಗಿ ವೀರನಂತೆ ಮಧ್ಯರಾತ್ರಿ ಎದ್ದನು
ಮಡದಿ ಮಗುವ ತೊರೆದನವನು ಅಡವಿ ದಾರಿ ಹಿಡಿದನು।
ಅರಮನೆಯ ಮೋಹವನ್ನು ಹರಿದುಹಾಕಿ ಹೋದನು
ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು ॥

**ಅಥವಾ**

ಕಾಡು ಕಾಡು ಅಲೆದ ಅವಗೆ ನಾಡಿನರ್ಥ ಹೊಳೆಯಿತು
ಕೋಗಿಲೆಯ ಹಾಡದೊಂದು ದೂರದಿಂದ ಕೇಳಿತು।
ಬೆಳ್ಳಿಚುಕ್ಕಿ ಬಾನಿನಲ್ಲಿ ಆಗತಾನೆ ಬೆಳಗಿತು
ಬೋಧಿವೃಕ್ಷದಲ್ಲಿ ಮಹಾಬೆಳಕೊಂದು ಕಂಡಿತು ॥

**X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ವಾಕ್ಯಗಳಲ್ಲಿ ಉತ್ತರ ಬರೆಯುವುದು.** **ವಿಷಯಾಂಶಕ್ಕೆ = 03**

**35.** **ಭಾಷಾಶೈಲಿ, ಪದ ಬಳಕೆಗೆ =01**

**ಉತ್ತರ :** ಬದುಕಿಗೊಂದು ಗುರಿ ಇಲ್ಲದಿದ್ದರೆ ಚುಕ್ಕಾಣಿ ಇಲ್ಲದ ನೌಕೆಯಂತೆ. ಹೀಗಾಗಿ ಬದುಕಿಗೊಂದು ನಿಶ್ಚಿತ ಗುರಿ ಇರಬೇಕು. ಜೀವನದಲ್ಲಿ ಹಲವಾರು ಗುರಿಗಳನ್ನು ಇಟ್ಟುಕೊಂಡು ಯಶಸ್ಸು ಕಾಣಲು ಸಾಧ್ಯವಿಲ್ಲ. ಒಂದು ಬಾಣಕ್ಕೆ ಗುರಿ ಒಂದೇ, ದೇಹಕ್ಕೆ ಆತ್ಮ ಒಂದೇ,ಅಂತೆಯೇ ನಮ್ಮ ಜೀವನಕ್ಕೂ ಒಂದೇ ಗುರಿ ಇರಬೇಕು. ಸ್ವಾರ್ಥವನ್ನು ತ್ಯಜಿಸಿ, ದೇಶದ ಅಭಿವೃದ್ಧಿಗೆ, ಸಮಾಜದ ಏಳಿಗೆಗೆ, ಪರರ ಹಿತಕ್ಕೆ ಶ್ರಮಿಸುವ ಹಾಗೂ ನೊಂದವರ ಬದುಕಿಗೆ ಸಹಾಯ ಮಾಡುವ ದಿಸೆಯಲ್ಲಿ ನಮ್ಮ ಬದುಕು ರೂಪಿತಗೊಳ್ಳಬೇಕು. ಸಮಾಜದಿಂದ ಅನುಕೂಲಗಳನ್ನು ಪಡೆದು ಬೆಳೆದ ನಾವು ಅದೇ ಸಮಾಜದ ಹಿತಕ್ಕೆ ದುಡಿಯುವಂತಾಗಬೇಕು. ನರರಲ್ಲಿ ನಾರಾಯಣನ ರೂಪವನ್ನು ಕಂಡು ಜನಸೇವೇಯೇ ದೇವರ ಸೇವೆ ಎಂದು ಭಾವಿಸಿ ಈ ಭೂಮಿಯಲ್ಲಿ ಸ್ವರ್ಗವನ್ನು ಕಾಣುವುದು ನಮ್ಮ ಜೀವನದ ಗುರಿಯಾಗಿರಬೇಕು ಎಂದು ಅಡಿಗರು ಆಶಿಸಿದ್ದಾರೆ.

**ಅಥವಾ**

**ಉತ್ತರ :** ಅಲ್ಪವಾದ ಆಸೆಗಳಿಗೆ ಬಲಿಯಾಗದೇ ನಿಶ್ಚಲವಾದ ಒಂದೇ ಗುರಿಯನ್ನು ಹೊಂದಬೇಕು. ಅದನ್ನು ಸಾಧಿಸಲು ಸತತ ಪ್ರಯತ್ನ ಮಾಡಬೇಕು. ಕಮಲದ ಹೂವು ಕೆಸರಿನಲ್ಲಿ ಇದ್ದರೂ ಸೂರ್ಯನನ್ನು ಅನುಸರಿಸಿ ಅರಳುವುದು. ಅದೇರೀತಿ ನಮ್ಮ ಹಿನ್ನೆಲೆ ಹೇಗೇ ಇದ್ದರೂ ಉನ್ನತ ಆದರ್ಶಗಳನ್ನು ಅನುಸರಿಸಬೇಕು. ಅದನ್ನು ಸಾಧಿಸಿ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬೇಕು. ಗುರಿಯನ್ನು ಮತ್ತೆ ಮತ್ತೆ ಬದಲಾಯಿಸುವುದು ಹೇಡಿತನ. ಸಾಧನೆಯ ದಾರಿಯಲ್ಲಿ ಎದುರಾಗುವ ಕಷ್ಟಗಳಿಗೆ ಹೆದರದೆ ಮುಂದೆ ಸಾಗಬೇಕು. ಒಂದು ಬಾಣಕ್ಕೆ ಒಂದೇ ಗುರಿ, ಒಂದು ದೇಹಕ್ಕೆ ಒಂದೇ ಆತ್ಮ. ಅದೇ ರೀತಿ ಒಂದು ಜೀವನಕ್ಕೆ ಒಂದೇ ಗುರಿ ಇರಬೇಕು. ಜೀವನದಲ್ಲಿ ಹಲವಾರು ಗುರಿಗಳನ್ನು ಇಟ್ಟುಕೊಂಡು ಯಶಸ್ಸು ಕಾಣಲು ಸಾಧ್ಯವಿಲ್ಲ. ಮನುಷ್ಯರಲ್ಲಿ ದೇವರನ್ನು ಕಂಡು ಭೂಮಿಯನ್ನೇ ಸ್ವರ್ಗವಾಗಿ ಭಾವಿಸಿ ಕೇವಲ ಸ್ವಾರ್ಥಕ್ಕಾಗಿ ಬದುಕದೆ, ಪರಹಿತಕ್ಕಾಗಿ ಬದುಕುವುದು ನಿಜವಾದ ಜೀವನ. ಅದಿಲ್ಲದಿದ್ದರೆ ಜೀವನ ವ್ಯರ್ಥ.

**XI. 36. ಉತ್ತರ :** **1 X 4 = 4 (2+2)**

**ಅ)** ಇಡೀ ವಿಶ್ವವನ್ನೇ ಕಂಗೆಡಿಸಿದ್ದ ಅಪಾಯಕಾರಿ ಕರೋನ ವೈರಸ್‌ಗೆ 16ನೇ ಜನೇವರಿ 2021ರಲ್ಲಿ ಬಿಡುಗಡೆಮಾಡಲಾಯಿತು. ಈ ದಿನದಂದು ದೇಶಾದ್ಯಂತ 3006 ಲಸಿಕಾ ಕೇಂದ್ರಗಳು ಏರ್ಪಾಟು ಮಾಡಿರುವುದು ಸಂತಸದ ಸಂಗತಿ. ಪ್ರತಿದಿನ 100 ಜನರಿಗೆ ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಲಸಿಕೆ ವಿತರಣೆ ಮಾಡಲಾಗುತ್ತದೆ.

**ಬ)** ಮೊದಲ ಹಂತದಲ್ಲಿ ಕರೋನಾ ವಾರಿಯರ್ಸ್‌ಗೆ, ಕೇಂದ್ರ ಆರೋಗ್ಯ ಸಿಬ್ಬಂದಿಗೆ, ಸೇನಾ ಸಿಬ್ಬಂದಿಗೆ, ಆರೋಗ್ಯ ಕಾರ್ಯಕರ್ತರಿಗೆ ನೀಡಲಾಗುತ್ತದೆ. ಕೋವಿಶೀಲ್ಡ್ ಲಸಿಕೆಯ ಒಂದು ವಲಯನಲ್ಲಿ 5ಎಂ.ಎಲ್ ಇದ್ದು ಒಬ್ಬ ವ್ಯಕ್ತಿಗೆ 0.5 ಎಂಎಲ್ ನಂತೆ ಹತ್ತು ಮಂದಿಗೆ ನೀಡಲಾಗುತ್ತದೆ

**XII. ಪ್ರಬಂಧ ಬರೆವಣಿಗೆ (ಯಾವುದಾದರೂ ಒಂದಕ್ಕೆ ಮಾತ್ರ)**

37. ಪರಿಸರ ಮಾಲಿನ್ಯ – ಪರಿಹಾರೋಪಾಯಗಳು — **ಪೀಠಿಕೆ / ಪ್ರಸ್ತಾವನೆ = 01**

**ಅಥವಾ** — **ವಿಷಯ ನಿರೂಪಣೆ = 02**

ಗ್ರಂಥಾಲಯ — **ಭಾಷಾಶೈಲಿಗೆ, ಮುಕ್ತಾಯ / ಉಪಸಂಹಾರ = 01**

**XIII. 38. ಉತ್ತರ: ಪತ್ರ ಲೇಖನ**

**ವ್ಯಾವಹಾರಿಕ ಪತ್ರ :**
**ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ = 01**
**ಪತ್ರದ ಒಡಲು = 02**
**ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ = 01**
**ವಿನ್ಯಾಸ, ಪದಬಳಕೆ, ಶೈಲಿ = 01**

**ಅಥವಾ**

**ವೈಯಕ್ತಿಕ ಪತ್ರ :**
**ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ = 01**
**ಪತ್ರದ ಒಡಲು = 02**
**ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ = 01**
**ವಿನ್ಯಾಸ, ಪದಬಳಕೆ, ಶೈಲಿ = 01**

**ಮಾದರಿ ಉತ್ತರಪತ್ರಿಕೆ 02**

**I. ಬಹು – ಆಯ್ಕೆ ಪ್ರಶ್ನೆ ( ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : 4X 1 = 4**

1. 'ರಾಟೆ' – ಪದದ ಸಮಾನಾರ್ಥಕ ಪದ
ಅ) ಚಕ್ರ
2. 'ಯೋಗಿ' ಈ ಪದದ ತದ್ಭವ ರೂಪ
ಬ)ಜೋಗಿ
3. 'ಮನದಟ್ಟು' ಈ ಪದದಲ್ಲಿರುವ ಸಂಧಿ
ಬ)ಆದೇಶಸಂಧಿ
4. 'ಸಜೀವ' – ಈ ಪದದ ವಿರುದ್ಧಾರ್ಥಕ ಪದ
ಅ) ನಿರ್ಜೀವ

**II. ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ : 12 X 1 = 12**
**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)**

5. ಜಿಂಕೆ ಹಾರಿ ತಪ್ಪಿಸಿಕೊಂಡಿದ್ದರಿಂದ ವಿಷದ ಬಾಣವು ಮರಕ್ಕೆ ತಗುಲಿತು.
6. ಈ ನಾಡಿನ ಬೆನ್ನೆಲುಬು ಕೃಷಿಕ (ರೈತ)
7. ಪುಟ್ಟರಾಜರ ತಂದೆ ರೇವಯ್ಯ ಮತ್ತು ಸಿದ್ದಮ್ಮ.
8. ಸ್ವದೇಶಿ ಆಂದೋಲನಕ್ಕೆ ಕೈ ಜೋಡಿಸಲು ಪುಟ್ಟರಾಜರು ಖಾದಿಬಟ್ಟೆ ತೊಡಲು ನಿರ್ಧರಿಸಿದರು.
9. ಹಕ್ಕಿಗೂಡಿನಲ್ಲಿ ಕಲಾವಿದನ ಸ್ವೋಪಜ್ಞತೆ, ವಿಜ್ಞಾನಿಯ ತಂತ್ರಜ್ಞಾನದ ಸಮನ್ವಯತೆ ಇದೆ.
10. ಅಸ್ಪ್ರಶ್ಯತೆ ಆಚರಿಸುವ ಮನುಷ್ಯನಿಗೆ ಹಕ್ಕಿಗಳು ಸ್ಪರ್ಶಸಂಜೀವಿನಿಯ ಪಾಠ ಹೇಳುತ್ತವೆ.
11. ಗೋಪಾಲನ ಗೆಳೆಯರ ಹೆಸರು ನಾಣಿ, ಮಾಧು, ಕಿಟ್ಟಿ ಮತ್ತು ರಾಮು
12. ಏಣಿಯ ಉಪಕಾರವನ್ನು ಮರೆತು ತಿರಸ್ಕರಿಸಿದವರನ್ನು ಕವಯತ್ರಿ ತ್ರಿಶಂಕುಗಳು ಎಂದು ಕರೆದಿದ್ದಾರೆ
13. ತಿಮಿರಕ್ಕೆ ವೈರಿ ಬೆಳಕು (ದೀಪ)
14. ತಪಸ್ಸಿಗಿಂತ ಜೀವಪ್ರೀತಿಯೇ ದೊಡ್ಡದು ಎಂಬುದು ಸಿದ್ದಾರ್ಥನು ಕಂಡುಕೊಂಡ ಬದುಕಿನ ಗೂಡಾರ್ಥ.
15. ಶಿವನು ಕುಣಿಗಲ್ ಕೆರೆಯ ಅಂದವನ್ನು ನೋಡಲು ಬಂದನು.
16. ಕೌರವನ ಸೇನೆಯು ಉತ್ತರನಿಗೆ ಬಲದ ಸಮುದ್ರದಂತೆ ಕಾಣಿಸಿತು.

**III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 8 X 2 = 16**
**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು)**

17. "ಸುಖ ಸಂಪತ್ತು ಇರುವಾಗ ಜೊತೆಯಲ್ಲಿರುವುದು. ದುರ್ಬರ ಗಳಿಗೆಯಲ್ಲಿ ಅವರಿಂದ ದೂರ ಸರಿಯುವುದು."

18. ತಲೆಯ ಮೇಲೊಂದು ಸಣ್ಣದೊಂದು ಕಿರೀಟ, ನವಿಲುಗರಿ, ಕೈಯಲ್ಲೊಂದು ಕೊಳಲು ಇವು ಬನದ ಗೋಪಾಲನ ವೇಷಭೂಷಣಗಳು.

ಶಿಕ್ಷಣ ಚಿಲುಮೆ

19. ಬನದಲ್ಲಿ ಎಷ್ಟೊಂದು ಸೊಗಸು! ಬನದಲ್ಲಿ ಮಲ್ಲಿಗೆಯ ಹೂವು, ಕೇದಗೆಯ ಹೂವು, ಸಂಪಿಗೆಯ ಹೂವು, ಪರ್ವತಬಾಳೆಯ ಹೂವು, ಗೋರಂಟಿಯ ಹೂವು ! ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತಿತ್ತು. ಹಕ್ಕಿಗಳ ಇಂಪಾದ ಗಾನ.1 ತಂಗಾಳಿ। ಸೂರ್ಯದೇವನ ಹೊಂಬೆಳಕು. ಹಸುರಾದ ಚಿಗುರು ಹುಲ್ಲಿನ ಮೇಲೆ ಕೋಟ್ಯಂತರ ಹಿಮವಣಿಗಳು ಮಿರುಗುವ ಲೀಲೆ ಈ ರೀತಿಯಾಗಿ ಗೋಪಾಲನು ಬನದ ಸೊಗಸನ್ನು ವರ್ಣಿಸಿದನು.

20. ಸದ್ದು ಗದ್ದಲದೊಡನೆ ಮಾಡುವ ಕಾರ್ಯಗಳು. ಅಶಾಂತಿಯಿಂದ ಕೂಡಿದ್ದು, ಅಸಫಲವಾಗುತ್ತವೆ. ಹಸಿಸೌದೆ ಬುಸುಗುಟ್ಟಿ ಧ್ವನಿ ಮಾಡುವಂತೆ, ಕಿಡಿ ಸೋಕಿದಾಗ ಸಿಡಿಮದ್ದು ಅಬ್ಬರಿಸುವಂತೆ ಕೆಲಸ ಕಾರ್ಯಗಳನ್ನು ಮಾಡಬಾರದು ಎಂದು ಕವಿ ನಿದರ್ಶಿಸಿದ್ದಾರೆ.

21. ಜನರು ನೀರನ್ನು ಕಂಡಲ್ಲಿ ಮುಳುಗುತ್ತಾರೆ, ಮರವನ್ನು ಕಂಡರೆ ಸುತ್ತುತ್ತಾರೆ. ಆ ಜನರು ಕೂಡಲಸಂಗಮನನ್ನು ಮೆಚ್ಚದೆ ಬತ್ತುವ ಜಲವನ್ನು, ಒಣಗಿದ ಮರವನ್ನು ಮೆಚ್ಚುತ್ತಾರೆ.

22. ಈ ಮಾತಿನ ಅರ್ಥವೇನೆಂದರೆ ಬಾಹ್ಯ ರೂಪ ಸುಂದರವಾಗಿದ್ದು ಗುಣವು ಚೆನ್ನಾಗಿ ಇರದಿದ್ದರೆ ಏನ್ನು ಫಲವಿಲ್ಲ. ಹಾಗೆಯೇ ತಟ್ಟೆಯಿಂದ ಅನ್ನವಿಲ್ಲದೆ ಇದ್ದರೆ ಏನೂ ಫಲವಿಲ್ಲ ತಾನಿದ್ದು ಚನ್ನ ಮಲ್ಲಿಕಾರ್ಜುನನ ಜ್ಞಾನವಿಲ್ಲದೆ ಇದ್ದರೆ ಎನೂ ಫಲವಿಲ್ಲ

23. ಹಾವಿನಂತಹ ದುಷ್ಟ ಜಂತುವು ಕೆಣಕದೆ ಯಾರನ್ನೂ ಹಿಂಸಿಸದು. ಆದರೆ ಮನುಷ್ಯನಾದರೆ ಸುಮ್ಮನೆ ಬಿಡುವನೆ? ಅವನ ಅಸೆಯ ಹಾವು ಯಾರೂ ಕೆಣಕದಿದ್ದರೂ ಎಲ್ಲರನ್ನು ಕಡಿಯುವುದು.

24. ಕಳ್ಳರ ಗುರು ಪಾಠದಿಂದ ನಾವು ಕಲಿತುಕೊಳ್ಳಬೇಕಾದ ವಿಚಾರಗಳು ಕೆಲಸವನ್ನು ಶ್ರದ್ಧೆಯಿಂದ ಮನಃಪೂರ್ವಕವಾಗಿ ಮಾಡಬೇಕು ತಪ್ಪುಮಾಡಿದವರನ್ನು ದೂರ ಮಾಡಬಾರದು, ನಿಂದಿಸಬಾರದು, ಕೆಡಕು ಬಗೆಯಬಾರದು, ತಪ್ಪುಗಳನ್ನು ತಿದ್ದಿಕೊಳ್ಳಲು ಅವಕಾಶ ನೀಡಬೇಕು. ಸ್ವಾರ್ಥ ದುರಾಸೆಗಳಿಂದಾಗಿ ತಪ್ಪು ಮಾಡುತ್ತಾರೆ ಅಂತಹವರನ್ನು ತಿದ್ದಿಕೊಳ್ಳಲು ಅವಕಾಶ ಕೊಡಬೇಕು.

**IV. ಕೆಳಗಿನ ಕವಿ / ಸಾಹಿತಿ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು.**

25. ಕುಮಾರವ್ಯಾಸ **ಜನ್ಮ ಸ್ಥಳ, ಕಾಲ =01**

**ಕೃತಿಗಳು, ಪ್ರಶಸ್ತಿ = 01**

**ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ = 01**

ಉತ್ತರ : ಕುಮಾರವ್ಯಾಸ (ನಾರಣಪ್ಪ) ಊರು ಗದುಗಿನ ಕೋಳಿವಾಡ. ಈತನ ಕಾಲ ಸುಮಾರು 1430. ಕುಮಾರವ್ಯಾಸನು ಗದುಗಿನ ಭಾರತ ಎಂಬ ಶ್ರೇಷ್ಠ ಕಾವ್ಯವನ್ನು ಬರೆದಿದ್ದಾನೆ. ಐರಾವತ ಕೃತಿಯು ಇವನದೆಂದು ಹೇಳಲಾಗಿದೆ. ಈತನನ್ನು 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂದು ಕರೆಯಲಾಗುತ್ತದೆ.

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯುವುದು.**

26. ಮರವ ಅಪ್ಪಿದಂತ ಬಳ್ಳಿ ಹೂವ ಮುಡಿದು ನಕ್ಕಿತು
ಹಕ್ಕಿಯೊಂದು ತನ್ನ ಮರಿಗೆ ಗುಟುಕು ಕೊಟ್ಟು ಹಾರಿತು
ಹುತ್ತಿನಿಂದ ಇರುವೆ ಗುಂಪು ಸಾಲುಗಟ್ಟಿ ನಡೆಯಿತು
ಬೆಳ್ಳಕ್ಕಿ ಹಿಂಡುಗಟ್ಟಿ ಬಾನಿಗೇಣಿ ಹಾಕಿತು.

**ಪಾಠ್ಯಾಂಶಕ್ಕೆ =02**
**ಪದ ಬಳಕೆ ಮತ್ತು ಶೈಲಿ = 01**

ಉತ್ತರ : ಈ ಪದ್ಯಭಾಗವನ್ನು ಡಾ. ಬಸವರಾಜ ಸಬರದ ಅವರು ಬರೆದಿರುವ **“ಪದಕಟ್ಟಿ ಹಾಡೇನ”** ಕವನ ಸಂಕಲನದಿಂದ ಆಯ್ದ **“ಬೋಧಿವೃಕ್ಷದ ಹಾಡು”** ಪದ್ಯದಿಂದ ಆರಿಸಲಾಗಿದೆ. ಕವಿ ಸಿದ್ದಾರ್ಥನು ಬುದ್ಧನಾದ ರೀತಿಯನ್ನು ಮತ್ತು ಯುದ್ಧವನ್ನು ತೊರೆದು ಪ್ರೀತಿ ಕೊಟ್ಟಂತಹ ಕಥೆಯನ್ನು ಕೇಳಿರಿ ಎಂದು ಈ ರೀತಿ ಹೇಳುತ್ತಾರೆ. ಸಿದ್ದಾರ್ಥನಿಗೆ ಬೋಧಿವೃಕ್ಷದ ಕೆಳಗೆ ಜ್ಞಾನೋದಯವಾದಾಗ, ಮರವನ್ನು ತಬ್ಬಿಕೊಂಡು ಬೆಳೆದ ಬಳ್ಳಿಯಲ್ಲಿ ಹೂಗಳು ಅರಳಿ ನಗುತ್ತಿದ್ದವು. ಹಕ್ಕಿಯೊಂದು ತನ್ನ ಮರಿಯ ಬಾಯಿಗೆ ಆಹಾರ ಕೊಟ್ಟು ಹಾರಿತು. ಹುತ್ತದಿಂದ ಇರುವೆಗಳು ಗುಂಪಾಗಿ ಸಾಲುಗಟ್ಟಿ ನಡೆದವು. ಬೆಳ್ಳಕ್ಕಿಗಳು ಗುಂಪುಗುಂಪಾಗಿ ಆಕಾಶಕ್ಕೆ ಏಣಿಯನ್ನೇ ಹಾಕುವಂತೆ ಹಾರಾಡುತ್ತಿದ್ದವು ಎಂದು ಕವಿ ಸೊಗಸಾಗಿ ವರ್ಣಿಸುತ್ತಾರೆ.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸುವುದು :**

27. **“**ಸಂಗೀತ ಲೋಕದಲ್ಲಿ ಧ್ರುವತಾರೆಯಂತೆ ಬೆಳಗುತ್ತಿರುವ ಪಂಡಿತ ಪುಟ್ಟರಾಜ ಗವಾಯಿಗಳು’

**ಅಲಂಕಾರವನ್ನು ಹೆಸರಿಸುವುದು = 01**
**ಲಕ್ಷಣ ಮತ್ತು ಸಮನ್ವಯಗೊಳಿಸುವುದು = 02**

**ಉತ್ತರ :** ಅಲಂಕಾರದ ಹೆಸರು : ಉಪಮಾಲಂಕಾರ
ಲಕ್ಷಣ : ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದನ್ನು ಉಪಮಾಲಂಕಾರ ಎನ್ನುತ್ತೇವೆ.
ಉಪಮೇಯ : ಪುಟ್ಟರಾಜ ಗವಾಯಿಗಳು
ಉಪಮಾನ : ಧ್ರುವತಾರೆ
ಉಪಮಾವಾಚಕ : ಅಂತೆ
ಸಮಾನಧರ್ಮ : (ಮಿನುಗುವುದು) ಬೆಳಗುವುದು
ಸಮನ್ವಯ : ಇಲ್ಲಿ ಉಪಮೇಯವಾದ ಪುಟ್ಟರಾಜ ಗವಾಯಿಗಳನ್ನು ಉಪಮಾನವಾದ ಧ್ರುವತಾರೆಗೆ ಹೋಲಿಸಿ ಹೇಳಲಾಗಿರುವುದರಿಂದ ಇದು ಉಪಮಾಲಂಕಾರವಾಗಿದೆ.

**VII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ.**

28. “ಕಾಯಕವೇ ಕೈಲಾಸ”

**ಅಥವಾ**

“ಹಕ್ಕಿಗಳಿಗೆ ಗೂಡು ಮಕ್ಕಳಿಗೆ ತಾಯಿ”

**ಗಾದೆಯ ಮಹತ್ವದ ವಿವರಣೆ = 01**
**ಉದಾಹರಣೆಯೊಂದಿಗೆ ಅರ್ಥ ವಿವರಣೆ = 01**
**ಭಾಷಾಶೈಲಿಗೆ–ಪದಬಂಧಗಳಿಗೆ = 01**

**VIII.** **ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.**

**ಕೃತಿ, ಕರ್ತೃ, ಪದ್ಯದ ಹೆಸರು = 01**
**ಯಾರು–ಯಾರಿಗೆ ಸಂದರ್ಭ = 01**
**ಭಾಷಾಶೈಲಿಗೆ–ಪದಬಂಧಗಳಿಗೆ = 01**

29. "ಏನಾದರೂ ವರವನ್ನು ಕೇಳು ಕೊಡುತ್ತೇನೆ'

**ಉತ್ತರ :** ಈ ವಾಕ್ಯವನ್ನು ಅ.ರಾ ಮಿತ್ರ ಅವರ ಒಣಮರದ ಗಿಳಿ ' ಪಾಠದಿಂದ ಆರಿಸಲಾಗಿದೆ. ಈ ಮಾತನ್ನು ಇಂದ್ರನು ಗಿಳಿಗೆ ಹೇಳಿದನು.ಸಾಮಾನ್ಯರ ವರ್ತನೆಗಿಂತ ಭಿನ್ನವಾದ ಗಿಳಿಯ ನಡತೆಯನ್ನು, ತತ್ವನಿಷ್ಠೆಯನ್ನು ಇಂದ್ರನು ಮೆಚ್ಚಿಕೊಂಡನು ಪರರ ಹಿತವನ್ನೇ ಬಯಸುವ ಗಿಳಿಗೆ ಅದು ಕೇಳಿದ ವರವನ್ನು ಕೊಡಬೇಕೆಂದು ನಿರ್ಧರಿಸಿದ. 'ಏನಾದರೂ ವರವನ್ನು ಕೇಳು ಕೊಡುತ್ತೇನೆ" ಎಂದು ಗಿಳಿಗೆ ಹೇಳಿದ.

30."ನಾನು ನೋಡುತ್ತೇನೆ ಹೇಗೆ ಇಳಿಯುತ್ತಾರೆಂದು"

**ಉತ್ತರ :** ಈ ವಾಕ್ಯವನ್ನು ಸುಕನ್ಯಾ ಮಾರುತಿ ಅವರ 'ಏಣಿ' ಕವನ ದಿಂದ ಈ ಸಾಲನ್ನು ಆರಿಸಲಾಗಿದೆ. ಏಣಿ ತನ್ನನ್ನು ಬಳಸಿಕೊಂಡವರ ಬಗ್ಗೆ ಹೀಗೆ ಸವಾಲು ಹಾಕಿದೆ ಜನಸಾಮಾನ್ಯರು ಏಣಿಯ ಸಹಾಯದಿಂದ ಮೇಲಕ್ಕೆ ಹತ್ತಿ ಹೋಗಿ ಅದಕ್ಕೆ ಕೈ ಬೀಸಿದಾಗ ಅವರು ಅದರ ಸಹಾಯವಿಲ್ಲದೆ ಹೇಗೆ ಕೆಳಗೆ ಇಳಿಯುತ್ತರೆಂದು ನೋಡುತ್ತೇನೆ ಎಂದು ಸವಾಲು ಹಾಕುವ ಸಂದರ್ಭದಲ್ಲಿ ಈ ಮಾತು ಬಂದಿದೆ.

31. "ಅವನು ಬಂದರೆ ಕರೆದುಕೊಂಡು ಹೋಗು ತಾಯಿ'

**ಉತ್ತರ :** ಈ ವಾಕ್ಯವನ್ನು ಎಂ. ಕೆ ರಮೇಶಗೌಡ ಅವರ 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ' ಎಂಬ ಪಾಠದಿಂದ ಆರಿಸಲಾಗಿದೆ. ಈ ಮಾತನ್ನು ಪಂಚಾಕ್ಷರ ಗವಾಯಿಗಳು ಪುಟ್ಟರಾಜರ ತಾಯಿಗೆ ಹೇಳಿದರು ಪುಟ್ಟರಾಜರ ತಾಯಿ ಸಿದ್ದಮ್ಮನಿಗೆ ಸಂಗೀತದ ಸಕಲ ವಿದ್ಯೆಗಳಲ್ಲಿ ಪಾರಂಗತನಾದ ತನ್ನ ಮಗನನ್ನು ನೋಡಿ ತಾಯಿಯ ಅಂತಃಕರಣ ತುಂಬಿ ಬಂತು ಪಂಚಾಕ್ಷರ ಗವಾಯಿಗಳ ಪಾದಕ್ಕೆರಗಿ ತನ್ನ ಮಗನನ್ನು ಮನೆಗೆ ಕಳುಹಿಸಿಕೊಡುದಂತೆ ಬೇಡಿಕೊಂಡಳು ಆಗ ಪಂಚಾಕ್ಷರಿ ಗುರುಗಳು ಈ ಮಾತನ್ನು ಹೇಳಿದರು.

32. "ಕಷ್ಟಕ್ಕೆ ಬಾಯಿ ಬಿಡುತಾದೆ"

**ಉತ್ತರ :** ಈ ವಾಕ್ಯವನ್ನು 'ಮೂಡಲ್ ಕುಣಿಗಲ್ ಕೆರೆ' ಜನಪದ ಗೀತೆಯಿಂದ ಆರಿಸಲಾಗಿದೆ. ಈ ಮಾತನ್ನು ಕೆರೆಯ ಸೌಂದರ್ಯದಿಂದ ಹಕ್ಕಿಗಳು ಹೇಗೆ ಕಾಣುತ್ತವೆ ಎಂದು ಜನಪದರು ಹೇಳಿದ್ದಾರೆ.ಕೆರೆಯ ಅಂದವನ್ನು ನೋಡಲು ಶಿವನು ಬಂದಾಗ ಜಲಚರ ಪ್ರಾಣಿಗಳು ಶಿವನನ್ನು ನೋಡಲು ಬರುತ್ತದೆ. ಆ ಜಲಚರ ಪ್ರಾಣಿಗಳನ್ನು ತಿನ್ನಲು ಕಬ್ಬಕ್ಕಿಗಳು ಆಸೆ ಪಡುವುದು, ಹಾತೊರೆಯುವುದು ಮಾಡುತ್ತವೆ. ಎಂದು ವರ್ಣಿಸುವಾಗ ಈ ಮಾತು ಬಂದಿದೆ.

33. "ಹುಟ್ಟಿದ ಮಕ್ಕಳಿಗೆ ಬದುಕಿನ ಪಾಠ ಹೇಳುವ ಶಾಲೆ ಅದು"

**ಉತ್ತರ :** ಈ ವಾಕ್ಯವನ್ನು ಕೆ. ಕೃಪಾಕರ ಮತ್ತು ಸೇನಾನಿ ಬರೆದಿರುವ ' ಹಕ್ಕಿಗೂಡುಗಳ ನಿಗೂಢ ಜಗತ್ತು ಪಾಠದಿಂದ ಆರಿಸಲಾಗಿದೆ. ಹಕ್ಕೆ ಗೂಡಿನಲ್ಲಿ ನೋವಿದೆ ನಲಿವಿದೆ, ಸಂತಸದ ಧ್ವನಿಯಿದೆ ಜೀವ ಕಣ್ತೆರೆವ ಸೃಷ್ಟಿಯ ಅಚ್ಚರಿಯಿದೆ. ಕಷ್ಟಗಳನ್ನು ಎದುರಿಸಿ ಬದುಕುದ ಕಲೆಯನ್ನು ಪಕ್ಷಿಗಳು ತಮ್ಮ ಮರಗಳಿಗೆ ಕಲಿಸುತ್ತವೆ. ಹುಟ್ಟಿದ ಮಕ್ಕಳಿಗೆ ಪಾಠ ಹೇಳುವ ಶಾಲೆ ತಾಯಿ ಮಕ್ಕಳ ಒಗ್ಗಟ್ಟನ್ನು ಇಲ್ಲಿ ಕಾಣಬಹುದು ಎಂದು ಹೇಳುವಾಗ ಮೇಲಿನ ವಾಕ್ಯ ಬಂದಿದೆ.

**IX. ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು**

**(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ನಾಲ್ಕು ಅಂಕಗಳು).** **1 X 4 = 4**

34. ಕೆಸರೊಳಿದ್ದರು ಮೇಲೆ ಬಾಂದಳವ ನೋಡಿ
ಮಿಸುಪ ರವಿಕಿರಣಗಳ ಸಿರಿಗೆ ಮೆರೆದಾಡಿ
ಮಸಗುವಂಬುಜದಂತೆ ಧ್ಯೇಯದಾಳ್ವೆಸಕೆ
ಬಸಮಾಗು ಬಂದ ಮನುಜತೆಯ ಸಾರ್ಥಕತೆಗೆ.

**ಅಥವಾ**

ಒಂದು ಬಾಣಕೆ ಗುರಿಯು ಹಲವಿರುವುದುಂಟೆ?
ಒಂದು ದೇಹದೊಳಾತ್ಮವೆರಡಿರುವುದುಂಟೆ?
ಒಂದು ಜೀವನಕೇಕೆ ಹಲವು ಸಾಧ್ಯಗಳು
ಒಂದೇ ಹೆಗ್ಗುರಿಗೆ ಹೋರಾಡು ಹಗಲಿರುಳು.

**X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ವಾಕ್ಯಗಳಲ್ಲಿ ಉತ್ತರ ಬರೆಯುವುದು.** **ವಿಷಯಾಂಶಕ್ಕೆ = 03**

**35.** **ಭಾಷಾಶೈಲಿ, ಪದ ಬಳಕೆಗೆ =01**

**ಉತ್ತರ :** ಆಸೆ ಎಂದರೆ ಯುದ್ಧ ಯುದ್ಧ ಎಂದರೆ ಸೈನಿಕರು ಸೈನಿಕರ ಬಲ ಇದ್ದಾಗ ಮಾತ್ರ ದೇಶದ ಸಂರಕ್ಷಣೆ ಸಾಧ್ಯ ಇಲ್ಲದಿದ್ದರೆ ಬೇರೆ ದೇಶದವರು ಸುಲಭವಾಗಿ ನಮ್ಮದೇಶದ ಮೇಲೆ ಯುದ್ಧ ಸಾರಿ ನಮ್ಮನ್ನು ತಮ್ಮ ಗುಲಾಮರನ್ನಾಗಿ ಮಾಡಿಕೊಳ್ಳಬಹುದು ಆದುದರಿಂದ ಈ ದೇಶದ ರಕ್ಷಣೆ ಮಾಡುವವರು ಸೈನಿಕರು ಅವರು ಪ್ರಬಲರಾಗಿದ್ದಾಗ ದೇಶವನ್ನು ರಕ್ಷಣೆ ಮಾಡಲು ಸಾಧ್ಯ ಇಲ್ಲದಿದ್ದರೆ ಬಲಿಷ್ಠ ದೇಶ ಎಲ್ಲರನ್ನು ಹೊಡೆದು ಹಾಕಿ ತಾನೇ ಸೂರ್ಯ ಮುಳುಗದ ಸಾಮಾಜ್ಯವನ್ನು ಸ್ಥಾಪಿಸಿ ಸರ್ವಾಧಿಕಾರಿಯಂತೆ ಮೆರೆಯಬಹುದು ಆದುದರಿಂದ ನಮ್ಮ ರಕ್ಷಣಾ ಪಡೆ ತುಂಬಾ ಪ್ರಬಲವಾಗಿರಬೇಕು. ಅದಕ್ಕೆ ನಮ್ಮ ದೇಶದ ಬಜೆಟ್ ನಲ್ಲಿ ಹೆಚ್ಚಿನ ಭಾಗ ರಕ್ಷಣಾ ಇಲಾಖೆಗೆ ಮಿಸಲಾಗಿ ಇಡಲಾಗಿದೆ.

**ಅಥವಾ**

ಕೃಷಿಕ ನಾಡಿನ ಬೆನ್ನೆಲಬು ಒಕ್ಕಲಿಗ ಒಕ್ಕದಿರೆ ಜಗವೆಲ್ಲಾ ಬಿಕ್ಕುವುದು ಎನ್ನುವ ಮಾತಿದೆ. ಅಂದರೆ ಕೃಷಿಕರೇನಾದರೂ ಸತ್ಯಾಗ್ರಹ ಮಾಡಿ ಒಂದು ವರ್ಷ ನಾವು ಭೂಮಿಯನ್ನು ಉಳುವುದಿಲ್ಲ. ಯಾವ ಬೆಳೆಯನ್ನು ತೆಗೆಯುವುದಿಲ್ಲ ಎಂದರೆ ಗತಿಯೇನು ಆಹಾರವಿಲ್ಲದೆ ಬರೀ ವೈಜ್ಞಾನಿಕ ಬೆಳವಣಿಗೆಯಿಂದ ಬದುಕಲು ಸಾಧ್ಯವೇ ನಾವು ಯಾವ ಕಾರ್ಖಾನೆಯಿಂದಲೂ ಟೋಮೋಟೋ ಅಕ್ಕಿ ಪಡೆಯಲು ರಾಗಿ ಬೆಳೆಯಲು ಸಾಧ್ಯವಿಲ್ಲ ಇದಕ್ಕೆಲ್ಲ ಭೂಮಿಯೇ ಬೇಕು ರೈತನ ಬವರು ಭೂಮಿಗೆ ಸುರಿಯಬೇಕು ಹಾಗಾಗಿ ಸರ್ವಜ್ಞ ಕೋಟಿ ವಿದ್ಯೆಗಳಲ್ಲಿ ಮೇಟಿ ವಿದೆಯ್ಯೆ ಮೇಲು ಅಂದರೆ ವ್ಯಯಸಾಯವೇ ಮೇಲು ಆ ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯುವುದಿಲ್ಲ ಆದ್ದರಿಂದ ಕೃಷಿಕ ನಾಡಿನ ಬೆನ್ನಲುಬು.

**XI. 36. ಉತ್ತರ :** **1 X 4 = 4 (2+2)**

ಅ) ಪ್ರವಾಸದಿಂದ ದೇಶ–ವಿದೇಶಗಳನಂಬಿಕೆ, ವಿಚಾರ ಭಾಷೆ ಊಟ ಉಡುಗೆಗಳ ಪರಿಚಯವಾಗುತ್ತದೆ. ಬೇರೆ ಬೇರೆ ಜನರ ಸ್ವಭಾವ ಅರ್ಥವಾಗುತ್ತದೆ. ಪ್ರವಾಸಗಳನ್ನು ಕೈಗೊಂಡು ನಮ್ಮ ಅನುಭವ ಮತ್ತು ಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದು. ನಾವು ಕೈಗೊಂಡ ಪ್ರವಾಸದ ಅನುಭವಗಳನ್ನು ಹಂಚಿಕೊಳ್ಳಬಹುದು.

ಬ) ಶಿವರಾಮ ಕಾರಂತ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ವಿ. ಕೃ ಗೋಕಾಕ್, ಜಿ ಎಸ್ ಶಿವರುದ್ರಪ್ಪ, ನೇಮಿಚಂದ್ರ ಮುಂತಾದವರು ಪ್ರಮೂಖರು.

**XII. ಪ್ರಬಂಧ ಬರೆವಣಿಗೆ ( ಯಾವುದಾದರೂ ಒಂದಕ್ಕೆ ಮಾತ್ರ)**

37. ಪರಿಸರ ಮಾಲಿನ್ಯ – ಪರಿಹಾರೋಪಾಯಗಳು

**ಅಥವಾ**

ಗ್ರಂಥಾಲಯ

**ಪೀಠಿಕೆ / ಪ್ರಸ್ತಾವನೆ = 01**
**ವಿಷಯ ನಿರೂಪಣೆ = 02**
**ಭಾಷಾಶೈಲಿಗೆ, ಮುಕ್ತಾಯ / ಉಪಸಂಹಾರ = 01**

**XIII. 38. ಉತ್ತರ : ಪತ್ರ ಲೇಖನ**

**ವ್ಯಾವಹಾರಿಕ ಪತ್ರ :**

**ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ = 01**
**ಪತ್ರದ ಒಡಲು = 02**
**ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ = 01**
**ವಿನ್ಯಾಸ, ಪದಬಳಕೆ, ಶೈಲಿ = 01**

**ಅಥವಾ**

**ವೈಯಕ್ತಿಕ ಪತ್ರ :**

**ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ = 01**
**ಪತ್ರದ ಒಡಲು = 02**
**ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ = 01**
**ವಿನ್ಯಾಸ, ಪದಬಳಕೆ, ಶೈಲಿ = 01**

ಶಿಕ್ಷಣ ಕನ್ನಡ ಪಿಲಿಗ್ರಿ

## ಮಾದರಿ ಉತ್ತರ ಪತ್ರಿಕೆ – 3

**I.** **ಬಹು – ಆಯ್ಕೆ ಪ್ರಶ್ನೆ ( ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** **4X 1 = 4**

1. **'ಪರಹಿತ'** ಪದದ ವಿರುದ್ಧ ಪದ

**ಉತ್ತರ :** ಸಿ) ಬಂದರು

2. **'ಬ್ರಹ್ಮ'** ಈ ಪದದ ತದ್ಭವ ರೂಪ

**ಉತ್ತರ :** ಎ) ಬೊಮ್ಮ

3. **'ನಾನೊಂದು'** ಇದು ಯಾವ ಸಂಧಿಗೆ ಸಂಭಂದಿಸಿದ ಪದ

**ಉತ್ತರ :** ಸಿ) ಲೋಪ ಸಂಧಿ

4. **'ರೇವು'** ಪದದ ಸಮನಾರ್ಥಕ ಪದ

**ಉತ್ತರ :** ಸಿ) ಸ್ವಹಿತ

**II.** **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ :** **12 X 1 = 12**

**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)**

5. ಅಸಿ ಎಂದರೆ ಯುದ್ಧ (ಸೈನಿಕರು) ಮಸಿ ಎಂದರೆ ಸಾಹಿತ್ಯ ರಚನೆ.
6. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು 'ರಂಗ ಜಂಗಮ' ಖ್ಯಾತರಾಗಿದ್ದಾರೆ.
7. ಗುಹೆ, ಪೊಟರೆ, ಗೂಡು, ಬಿಲದಂಥ ಜಾಗಗಳು.
8. ಪುಟ್ಟರಾಜರು ಸಂಸ್ಕೃತ, ಹಿಂದಿ, ಕನ್ನಡ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು.
9. ಗೋಪಾಲ ಬೇಗನೆ ಎದ್ದು ಸ್ನಾನಮಾಡಿ ದೇವರ ಪೂಜೆಗೆ ಹೂವುಗಳನ್ನು ಕೊಯ್ದು ತರುವುದು.
10. ರಾಮು, ಕಿಟ್ಟಿ, ನಾಣಿ, ಮಾಧು ಗೋಪಾಲನ ಗೆಳೆಯರು.
11. ಧನವಿದ್ದವರಲ್ಲಿ ಇರಬೇಕಾದ ಗುಣ 'ದಯೆ'.
12. ಪುಣ್ಯ ತೀರ್ಥಗಳು ಬಾರದಿದ್ದರೆ ಕೆರೆಗಳು ನಿಷ್ಪ್ರಯೋಜಕ ಆಗುವುದು.
13. ತುಂಬಿದ ಕುಣಿಗಲ್ ಕೆರೆಯನ್ನು ನಿಂಬೆ ಹಣ್ಣಿಗೆ ಹೋಲಿಸಲಾಗಿದೆ.
14. ಕೀಳು ಆಸೆಗಳು ಈಡೇರದ ಆಸೆಗಳನ್ನು ಇಟ್ಟುಕೊಳ್ಳಬಾರದು ಅಂಥ ಆಸೆಗಳಿಂದ ಕಷ್ಟಗಳು ಬರುತ್ತವೆ. ಅಲ್ಲದೇ ನೆಮ್ಮದಿ ಕಳೆದುಕೊಂಡು ಮನಸ್ಸು ಒಂದು ಕಡೆ ನೆಲೆಯಿರದೆ ತೊಳಲುವುದು.
15. ಕಾಡನ್ನು ಅಲೆದ ಸಿದ್ದಾರ್ಥನಿಗೆ ನಾಡಿನರ್ಥ ಹೊಳೆಯಿತು.
16. ಮೇಲೇರಿದವರು ಸಹಾಯ ಮಾಡಿದವರನ್ನು ಮರೆತು ಕಷ್ಟದಲ್ಲಿ ಸಿಲುಕಿಕೊಂಡಾಗ ತ್ರಿಶಂಕಗಳು ಆಗುತ್ತಾರೆ.

**III.** **ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **8X 2 = 16**

**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು)**

17. ಹಕ್ಕಿಗಳು ವರ್ಣಮಯ ಹೂದಳವನ್ನು ಅಥವಾ ಹೊಳೆವ ಕಲ್ಲುಗಳನ್ನು ಹೆಕ್ಕಿ ತಂದು ಹೊರಮೈಗೆ ಅಂಟಿಸುತ್ತವೆ. ಕೆಲವು ಹದ್ದುಗಳಂತೂ ಬಣ್ಣದ ಗಾಜಿನ ಚೂರುಗಳನ್ನು ಬಟ್ಟೆಯ ಚಿಂದಿ ಹೀಗೆ ಮುಂತಾದವುಗಳಿಂದ ತಮ್ಮ ಗೂಡುಗಳನ್ನು ಅಲಂಕರಿಸುತ್ತವೆ.

18. ಹಕ್ಕಿ ಗೂಡಿನಲ್ಲಿ ನೋವಿದೆ, ನಲಿವಿದೆ, ಆಕ್ರಂದನವಿದೆ, ಸಂತಸದ ದನಿವಿದೆ, ಕಾವು ಗುಟುಕು ಪಡೆದು ಜೀವ ಕಣ್ತೆರೆವ ಸೃಷ್ಟಿಯ ಅಚ್ಚರಿಯಿದೆ. ಶತ್ರುಗಳ ಬೇಟೆಗೆ ಅಥವಾ ನೈಸರ್ಗಿಕ ವಿಕೋಪಕ್ಕೆ ತುತ್ತಾಗುವ ದಾರುಣವಿದೆ. ಈ ಅವಘಡಗಳನ್ನು ಎದುರಿಸಿ ಬದುಕುವ ಸಾಹಸಗಾಥೆ ಇದೆ.

19. ಉರಿದು ಬೆಳಕು ನೀಡುವುದು ಕರ್ಪೂರದ ಕೆಲಸ. ಅದು ಆರತಿ ತಟ್ಟೆಯಲ್ಲಿ ಮೌನವಾಗಿ ಉರಿಯುತ್ತದೆ. ಬೆಳಕು ನೀಡುತ್ತದೆ. ದೇವರ ದರ್ಶನ ಮಾಡಿಸುತ್ತದೆ. ಹೀಗೆ ಯಾವುದೇ ಸದ್ದುಗದ್ದಲವಿಲ್ಲದೇ ಅದು ತನ್ನ ಕೆಲಸ ಮಾಡುತ್ತದೆ.

20. ಕೌರವರ ಸೈನ್ಯವು ಅಪಾರವಾಗಿತ್ತು. ಕಣ್ಣು ಹಾಯಿಸಿದರೆ ಕೊನೆ ಮುಟ್ಟುವಷ್ಟು ದೊಡ್ಡದಾಗಿತ್ತು. ಸೈನ್ಯ ಬಲವು ಸಮುದ್ರದಂತೆ ಮನಸ್ಸಿನಲ್ಲಿ ಊಹಿಸಲೂ ಸಾಧ್ಯವಿಲ್ಲದಂತೆ ಇತ್ತು. ಭೂಮಿಯೇ ಮರಿ ಹಾಕಿದೆಯೋ ಎಂಬಂತೆ ಅಸಂಖ್ಯಾತವಾಗಿದ್ದ ಆ ಸೈನ್ಯದೊಂದಿಗೆ ಯುದ್ಧ ಮಾಡಿ ಗೆಲ್ಲಲು ಸಾಧ್ಯವೇ ಇಲ್ಲವೆಂದು ಉತ್ತರನು ಆ ಸೈನ್ಯಕ್ಕೆ ನಮೋ ಎಂದನು.

21.“ಕಾಯುವುದು ದೇವರ ಕೆಲಸ, ಕೊಲ್ಲುವುದು ರಾಕ್ಷಸರ ಕೆಲಸ“ ಎಂದು ವೈದ್ಯರು ನುಡಿದರು. ಈ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದವು.

22. ಹಾವಿನಂತಹ ದುಷ್ಟ ಜಂತವು ಕೆಣಕದ ಯಾರನ್ನು ಹಿಂಸಿಸದು, ಆದರೆ ಮನುಷ್ಯನಾದರೆ ಸುಮ್ಮನೆ ಬಿಡುವನೆ? ಅವರ ಆಸೆಯ ಹಾವು ಯಾರು ಕೆಣಕದಿದ್ದರೂ ಎಲ್ಲರನ್ನು ಕಡಿಯುವುದು.

23. ತುಂಬಿದ ಕುಣಿಗಲ್ ಕೆರೆಯಲ್ಲಿ ಅನೇಕ ಬಾಳೆ ಮೀನುಗಳನ್ನು ಹಿಡಿಯಲು ಮೀನುಗಾರರ ಬಲೆ ಬೀಸುತ್ತಾನೆ. ಈ ಬಲೆಯಲ್ಲಿ ಸಿಕ್ಕ ಬಾಳೆ ಮೀನುಗಳು ಬೊಬ್ಬೆ ಹೊಡೆಯುತ್ತವೆ.

24. ಉತ್ತರನು ಅರಮನೆಯ ನಾರಿಯರ ಮುಂದೆ ಬಾಯಿಗೆ ಬಂದಂತೆ ಜಂಭ ಕೊಚ್ಚಿಕೊಂಡು ಒಳ್ಳೆಯ ಸಾರಥಿ ಸಿಕ್ಕರೆ ಶತ್ರುಗಳನ್ನು ಎದುರಿಸುವುದಾಗಿ ಹೇಳಿದ್ದನು. ಆದರೆ ಕೌರವರ ಸೇನೆಯನ್ನು ನೋಡಿ ಓಡಿ ಹೋಗುತ್ತಿರುವ ಉತ್ತರವನ್ನು ನೋಡಿ ಕಾದುನಡೆ ಎಂದನು.

**IV. ಕೆಳಗಿನ ಕವಿ / ಸಾಹಿತಿ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು.**

25. ಅ.ರಾ.ಮಿತ್ರ

**ಜನ್ಮ ಸ್ಥಳ, ಕಾಲ =01**
**ಕೃತಿಗಳು, ಪ್ರಶಸ್ತಿ = 01**
**ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ = 01**

ಅಕ್ಕಿಹೆಬ್ಬಾಳು ರಾಮಣ್ಣಾ ಮಿತ್ರ ಇವರು 1935 ರಲ್ಲಿ ಮಂಡ್ಯ ಜಿಲ್ಲೆಯ ಕೆ. ಆರ್. ಪೇಟ್ ತಾಲ್ಲೂಕಿನ ಅಕ್ಕಿಹೆಬ್ಬಾಳದಲ್ಲಿ ಜನಿಸಿದರು. ಇವರು ಬರೆದ ಪ್ರಮುಖ ಕೃತಿಗಳೆಂದರೆ ‘ನಾನೇಕೆ ಕೊರೆಯುತ್ತೇನೆ’, ‘ಛಂದೋಮಿತ್ರ’,’ಮೇಘದೂತ‘,’ಮಹಾಭಾರತ ಪಾತ್ರ ಸಂಗತಿಗಳು‘,’ವಚನಕಾರರು ಮತ್ತು ಶಬ್ಧಕಲ್ಪ’,‘ ಕೈಲಾಸಂ ಬದುಕು ಬರಹ‘ ಮುಂತಾದವು. ಪ್ರಶಸ್ತಿಗಳು ನವರತ್ನರಾಂ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಕಾವ್ಯನಂದ ಪುರಸ್ಕಾರ, ಗೊರೂರು ಸಾಹಿತ್ಯ ಸಂದಿವೆ. ಪ್ರಸ್ತುತ ಪಾಠವನ್ನು “ಮಹಾಭಾರತ(ವ್ಯಾಸ) ಪಾತ್ರ ಸಂಗತಿಗಳು’ ಪುಸ್ತಕದಿಂದ ಆರಿಸಲಾಗಿದೆ.

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯುವುದು.**

**ಪಾಠ್ಯಾಂಶಕ್ಕೆ =02**
**ಪದ ಬಳಕೆ ಮತ್ತು ಶೈಲಿ = 01**

26. ಕಾಲೂರುವ ನೆಲವನ್ನು
ತಿರಸ್ಕರಿಸಿದ ಅವರು
ಆಕಾಶದಲ್ಲಿ ಎಷ್ಟು ಹೊತ್ತು
ಹಾರಾಡುತ್ತಾರೆ
ಮತ್ತೆ ನನ್ನ ಆಸರೆ ಬೇಕೇಬೇಕು.

ಈ ವಾಕ್ಯವನ್ನು ಸುಕನ್ಯಾ ಮಾರುತಿ ಅವರು ಬರೆದ 'ಸಮಗ್ರ ಕವನ ಸಂಕಲನ' ಕೃತಿಯಿಂದ ಆಯ್ದ "ಏಣಿ" ಎಂಬ ಪದ್ಯದಿಂದ ಆರಿಸಲಾಗಿದೆ. ಶ್ರಮಿಕರ ಮತ್ತು ಜನಸಾಮಾನ್ಯರ ಸಹಾಯ ಪಡೆದು ಪದವಿ ಅಧಿಕಾರ, ಕೀರ್ತಿ, ಹಣ, ಗೌರವ, ಯಶಸ್ಸು ಪಡೆದು ವ್ಯಕ್ತಿ ಮೇಲೇರುತ್ತಾನೆ. ತನ್ನ ಏಳಿಗೆಗೆ ಕಾರಣರಾದವರನ್ನು ಮರೆಯುತ್ತಾನೆ ಎಂದು ಕವಯತ್ರಿ ಈ ರೀತಿ ಹೇಳುತ್ತಾರೆ. ನನ್ನ ಆಸರೆ ಪಡೆದು ಮೇಲೇರಿದ ಜನರು ನನ್ನನ್ನೇ ಮರೆತಿದ್ದಾರೆ. ನಾನೂ ಕಾಲೂರಿ ನಿಂತಿರುವ ನೆಲವನ್ನೇ ತಿರಸ್ಕರಿಸಿದ್ದಾರೆ. ಇವರು ಎಷ್ಟು ಹೊತ್ತು ಮೇಲೆಯೇ ಅಥವಾ ಆಕಾಶದಲ್ಲಿಯೇ ಹಾರಾಡುತ್ತಾರೆ ನಾನೂ ನೋಡುತ್ತೇನೆ ಮತ್ತೆ ಅವರು ಅಲ್ಲಿಂದ ಕೆಳಗಿಳಿಯಲೇಬೇಕು. ಆಗ ನನ್ನ ಆಸರೆ ಬೇಕೇಬೇಕು ಎಂದು ಏಣಿ ಮೇಲೇರಿದವರಿಗೆ ಪ್ರಶ್ನಿಸುವುದನ್ನು ಕವಿಯತ್ರಿ ತುಂಬಾ ಸೊಗಸಾಗಿ ವರ್ಣಿಸಿದ್ದಾರೆ.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸುವುದು :**

27. "ಬಾಳೆಯ ಹಣ್ಣಿನಂತೆ ಬಾಗಿದ ಕುಣಿಗಲ್ ಕೆರೆ" **ಅಲಂಕಾರವನ್ನು ಹೆಸರಿಸುವುದು = 01**

**ಲಕ್ಷಣ ಮತ್ತು ಸಮನ್ವಯಗೊಳಿಸುವುದು = 02**

ಉಪಮಾನ: ಬಾಳೆಯ ಹಣ್ಣು
ಉಪಮೇಯ: ಕುಣಿಗಲ್ ಕೆರೆ
ಉಪಮಾವಾಚಕ ಪದ: ಅಂತೆ
ಸಮಾನಧರ್ಮ: ಸೌಂದರ್ಯ (ಬಾಗಿರುವಿಕೆ)

ಇಲ್ಲಿ ಉಪಮೇಯವಾದ ಕುಣಿಗಲ್ ಕೆರೆಯನ್ನು ಉಪಮಾನವಾದ ಬಾಳೆಹಣ್ಣಿಗೆ ಹೋಲಿಸಿ ಹೇಳಲಾಗಿರುವುದರಿಂದ ಇದು ಉಪಮಾಲಂಕಾರವಾಗಿದೆ.

**VII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ.**

28. "ಮನಸಿದ್ದರೆ ಮಾರ್ಗ" **ಗಾದೆಯ ಮಹತ್ವದ ವಿವರಣೆ = 01**

**ಅಥವಾ** **ಉದಾಹರಣೆಯೊಂದಿಗೆ ಅರ್ಥ ವಿವರಣೆ = 01**

"ಒಕ್ಕಲಿಗ ಒಕ್ಕದಿದ್ದರೆ ಜಗವೆಲ್ಲ ಬಿಕ್ಕುವುದು." **ಭಾಷಾಶೈಲಿಗೆ–ಪದಬಂಧಗಳಿಗೆ = 01**

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.**

**ಕೃತಿ, ಕರ್ತೃ, ಪಠ್ಯದ ಹೆಸರು = 01**
**ಯಾರು–ಯಾರಿಗೆ ಸಂದರ್ಭ = 01**
**ಭಾಷಾಶೈಲಿಗೆ–ಪದಬಂಧಗಳಿಗೆ = 01**

29. "ಅವರು ಯಾರಿಗೂ ಮೋಸ ವಂಚನೆ ಮಾಡುವವರಲ್ಲ"

ಈ ವಾಕ್ಯವನ್ನು ಡಾ.ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ರಚಿಸಿದ 'ವ್ಯಕ್ತಿತ್ವ' ಎಂಬ ಪ್ರಬಂಧ ಸಂಕಲನದಿಂದ ಆರಿಸಲಾದ ಅಸಿ–ಮಸಿ–ಕೃಷಿ ಎಂಬ ಪಾಠದಿಂದ ಆರಿಸಲಾಗಿದೆ.

ರೈತರು ಕಷ್ಟಪಡುವವರಷ್ಟು ಮತ್ತೊಬ್ಬರಿಲ್ಲ. ಅವರಂತೆ ತೊಂದರೆ ಅನುಭವಿಸುವವರೂ ಬೇರೊಬ್ಬರಿಲ್ಲ. ಮಳೆಯ ಅಭಾವ, ಇಲ್ಲವೇ ಅತಿವೃಷ್ಟಿ, ಭೂಮಿ ಬರಡಾಗುತ್ತಿರುವುದು, ಕಳಪೆ ಬೀಜಗಳು, ಇತ್ಯಾದಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದರೂ ರೈತರು ನಿರಾಶವಾದಿಗಳಾಗದೆ ಬಾಳನ್ನು ನಡೆಸುತ್ತಿದ್ದಾರೆ. ಆದರೆ ಅವರು ಯಾರಿಗೂ ಎಂದಿಗೂ ಮೋಸ ಮಾಡುವುದಿಲ್ಲ ಎಂದು ರೈತರ ಪ್ರಾಮಾಣಿಕತೆಯನ್ನು, ಕರ್ತವ್ಯ ನಿಷ್ಠೆಯನ್ನು ಈ ಮಾತಿನಲ್ಲಿ ವಿವರಿಸಲಾಗಿದೆ.

30. "ಗೊತ್ತು ಗುರಿಯು ಇಲ್ಲದೆ ಕತ್ತಲಲ್ಲಿ ನಡೆದನು"

ಈ ವಾಕ್ಯವನ್ನು ಡಾ. ಬಸವರಾಜ ಸಬರದ ಅವರು ರಚಿಸಿದ ಪದಕಟ್ಟಿ ಹಾಡೇನ ಕವನ ಸಂಕಲನದಿಂದ ಆರಿಸಲಾದ 'ಬೋಧಿವೃಕ್ಷದ ಹಾಡು' ಎಂಬ ಪದ್ಯದಿಂದ ಆರಿಸಲಾಗಿದೆ. ಲೌಕಿಕ

ಸುಖಭೋಗಗಳಿಂದ ಜೀವನದ ಗುರಿ ಸಾಧಿಸಲು ಸಾಧ್ಯವಿಲ್ಲ ಎಂಬುದನ್ನು ಅರಿತ ಬುದ್ಧನು ತನ್ನ ಹೆಂಡತಿ, ಮಗುವನ್ನು ಬಿಟ್ಟು ವೈಭವದ ರಾಜ್ಯ, ಅರಮನೆ, ಗೃಹಸ್ಥ ಜೀವನವನ್ನು ತ್ಯಜಿಸಿ, ಸತ್ಯವನ್ನು ಕಂಡುಕೊಳ್ಳಲು ಹೊರಟನು. ಸತ್ಯಾನ್ವೇಷಣೆಗೆ ಹೊರಟ ಸಿದ್ದಾರ್ಥನು ಕಾಡು ಮೇಡುಗಳಲ್ಲಿ ಗೊತ್ತು ಗುರಿಯು ಇಲ್ಲದೇ ಹಗಲು ರಾತ್ರಿ ಎನ್ನದೇ ಅಲೆದನು. ಹೀಗೆ ಜ್ಞಾನ ಸಂಪಾದನೆಗೆ ಬುದ್ಧನು ಪಟ್ಟ ಪ್ರಯತ್ನವನ್ನು ಈ ಮಾತಿನಲ್ಲಿ ಹೇಳಲಾಗಿದೆ.

31. "ಆ ಗೋಪಾಲ ಕೊಡಬೇಕು ನಾವು ಉಣಬೇಕು"

ಈ ವಾಕ್ಯವನ್ನು ಕುವೆಂಪು ಅವರು ಬರೆದ 'ನನ್ನಗೋಪಾಲ' ಎಂಬ ಕೃತಿಯಿಂದ ಆರಿಸಲಾದ 'ನನ್ನ ಗೋಪಾಲ' ಎಂಬ ಪಾಠದಿಂದ ಆರಿಸಲಾಗಿದೆ. ಈ ಮಾತನ್ನು ಗೋಪಾಲನ ತಾಯಿ ಗೋಪಾಲನಿಗೆ ಹೇಳಿದಳು.

ಗೋಪಾಲ ಶಾಲೆಯಿಂದ ಹಿಂದಿರುಗುವಾಗ ಸಂಜೆಯ ವೇಳೆ ಕಾಡಿನ ದಾರಿಯಲ್ಲಿ ಬರುವಾಗ ಭಯವಾಗುತ್ತದೆ. ನನ್ನ ಸಹಪಾಠಿಗಳೆಲ್ಲ ಆಳುಗಳ ಜೊತೆಗೆ ಬರುತ್ತಾರೆ. ನನಗೂ ಯಾರಾದರೂ ಜೊತೆಗೆ ಬೇಕು.ಎಂದು ಹೇಳಿದ. ಆಗ ತಾಯಿಯು "ಅವರು ಶ್ರೀಮಂತರು ನಾವು ಬಡುವರು ನೂಲು ಮಾರಿ ಬಂದ ಹಣದಿಂದ ಜೀವನ ನಡೆಸಬೇಕು. ದೇವರು ಕೊಟ್ಟಿದ್ದರಲ್ಲಿ ನಾವು ಸಂತೋಷದಿಂದ ಬದುಕಬೇಕು" ಎಂದು ಹೇಳುವಾಗ ಈ ಮಾತನ್ನು ಹೇಳಿದಳು.

32. "ವೇದಾಂತವನೋದಿ ಫಲವೇನಯ್ಯ"

ಈ ವಾಕ್ಯವನ್ನು ಸೊನ್ನಲಿಗೆ ಸಿದ್ದರಾಮನವರು ಆಚರಿಸಿದ ವಚನಗಳಿಂದ ಆಯ್ದ 'ವಚನಗಳು' ಎಂಬ ಪದ್ಯದಿಂದ ಈ ವಾಕ್ಯವನ್ನು ಆರಿಸಲಾಗಿದೆ.

ಭಕ್ತನಂತೆ ವೇಷವನ್ನು ಧರಿಸಿದ ಮಾತ್ರಕ್ಕೆ ನಿಜವಾದ ಭಕ್ತನಾಗಲು ಆಗುವುದಿಲ್ಲ. ಆ ವೇಷಕ್ಕೆ ತಕ್ಕಂತೆ ನಡೆನುಡಿಗಳು ಇರಬೇಕು. ಮನಸ್ಸಿನಲ್ಲಿ ಭಕ್ತಿಯಿಲ್ಲದೇ ಕೇವಲ ವೇಷ ಧರಿಸಿದ ಮಾತ್ರಕ್ಕೆ ಏನೂ ಆಗುವುದಿಲ್ಲ. ತನ್ನನ್ನೇ ಬ್ರಹ್ಮ ಎಂದು ತಿಳಿಯುವ ಜ್ಞಾನ ಮೂಡುವವರೆಗೆ ಎಷ್ಟು ವೇದಾಂತವನ್ನು ಓದಿದರೂ ಅದು ನಿಷ್ಪ್ರಯೋಜಕ. ತೋರಿಕೆಯ ಭಕ್ತಿಯಿಂದ ಪ್ರಯೋಜನವಿಲ್ಲ. ಎಂದು ವಚನಕಾರರು ಈ ಮಾತಿನಲ್ಲಿ ಹೇಳಿದ್ದಾರೆ.

33. "ಅದರ ಈಗೀನ ಅವಸ್ಥೆಯನ್ನು ನಾನು ನೋಡಲಾರೆ"

ಈ ವಾಕ್ಯವನ್ನು ಅ.ರಾ.ಮಿತ್ರ ಅವರು ಬರೆದ 'ಮಹಾಭಾರತ ಪಾತ್ರ ಸಂಗತಿಗಳು' ಎಂಬ ಗ್ರಂಥದಿಂದ ಆರಿಸಲಾದ 'ಒಣಮರದ ಗಿಳಿ' ಎಂಬ ಪಾಠದಿಂದ ಆರಿಸಲಾಗಿದೆ. ಈ ಮಾತನ್ನು ಗಿಳಿ ಇಂದ್ರನಿಗೆ ಹೇಳಿತು.

ಗಿಳಿಯ ತತ್ವನಿಷ್ಠೆಯನ್ನು ಪರಹಿತಾಕಾಂಕ್ಷಿ ಗುಣವನ್ನೇ ಮೆಚ್ಚಿದ ಇಂದ್ರನು ಗಿಳಿಗೆ ಕೇಳಿದ ವರಕೊಡುವುದಾಗಿ ಹೇಳಿದನು. ಆಗ ಗಿಳಿಯು ವರಕೊಡುವುದಾದರೆ ಮರವು ಮತ್ತೆ ಹಸಿರಾಗುವಂತೆ ಮಾಡು ಮರವು ಮತ್ತೆ ಹೂವು ಹಣ್ಣುಗಳಿಂದ ತುಂಬುವಂತೆ ಆಗಲಿ. ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ ಎಂದಿತು.

**IX. ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು**

**(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ನಾಲ್ಕು ಅಂಕಗಳು).** **1 X 4 = 4**

34. ಕೆಸರೊಳಿದ್ದರು ಮೇಲೆ ಬಾಂದಳವ ನೋಡಿ
ಮಿಸುಪ ರವಿಕಿರಣಗಳ ಸಿರಿಗೆ ಮೆರೆದಾಡಿ
ಮಸಗುವಂಬುಜದಂತೆ ಧ್ಯೇಯದಾಳ್ವೆಸಕೆ
ಬಸಮಾಗು, ಬಂದ ಮನುಜತೆಯ ಸಾರ್ಥಕತೆಗೆ.

**ಅಥವಾ**

ಒಂದು ಬಾಣಕೆ ಗುರಿಯು ಹಲವಿರುವುದುಂಟೆ?
ಒಂದು ದೇಹದೊಳಾತ್ಮವೆರಡಿರುವುದುಂಟೆ?
ಒಂದು ಜೀವನಕೇಕೆ ಹಲವು ಸಾಧ್ಯಗಳು?
ಒಂದೆ ಹೆಗ್ಗುರಿಗೆ ಹೋರಾಡು ಹಗಲಿರುಳು.

**X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ವಾಕ್ಯಗಳಲ್ಲಿ ಉತ್ತರ ಬರೆಯುವುದು.** **ವಿಷಯಾಂಶಕ್ಕೆ = 03**

**ಭಾಷಾಶೈಲಿ, ಪದ ಬಳಕೆಗೆ =01**

**35. ಉತ್ತರ :** ಬಾಲಕ ಪುಟ್ಟಯ್ಯನಿಗೆ ಹಾರ್ಮೋನಿಯಂ ನುಡಿಸುವ ಆಸೆ. ಒಮ್ಮೆ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ತನ್ನ ಮಾವನ ಹಾರ್ಮೋನಿಯಂ ಹಿಡಿದು ತಲ್ಲೀನನಾಗಿ ನುಡಿಸಲಾರಂಭಿಸಿದ. ಈ ನಾದ ಕೇಳಿ ಮನಸೋತ ಜನರು ಮನೆಯ ಒಳಗೆ ಬಂದು ಕುಳಿತರು. ಹೊಲಕ್ಕೆ ಹೋಗಿದ್ದ ಬಾಲಕನ ಮಾವ ಚಂದ್ರಶೇಖರಯ್ಯನವರು ಮನೆಗೆ ಬಂದಾಗ ಮನೆಗೆ ಹೊರಗೆ ಒಳಗೆ ಜನರ ಗುಂಪು ಕಂಡು ಆಶ್ಚರ್ಯಚಕಿತರಾದರು. ಮನೆಯ ಒಳಗೆ ಹಾರ್ಮೋನಿಯಮ್ ನುಡಿಸುತ್ತಿರುವವರು ಯೋಗಿಗಳೇ ಎಂದು ಭಾವಿಸಿ ಒಳ ಬಂದರು. ತಲ್ಲೀನನಾಗಿ ಹಾರ್ಮೋನಿಯಮ್ ನುಡಿಸುತ್ತಿದ್ದ ಪುಟ್ಟ ಬಾಲಕನನ್ನು ಕಂಡು ನಿಬ್ಬೆರಗಾದರು. ಮಾವನ ಪಾದ ಸಪ್ಪಳದಿಂದ ವಿಚಲಿತನಾದ ಬಾಲಕ ಒಮ್ಮೆಲೆ ಹಾರ್ಮೋನಿಯಮ್ ನುಡಿಸುವುದನ್ನು ನಿಲ್ಲಿಸಿ "ಮಾವ ತಪ್ಪಾಯಿತು ಕ್ಷಮಿಸು, ನಾನು ಇನ್ನೆಂದೂ ನಿನ್ನ ಹಾರ್ಮೋನಿಯಮ್ ಮುಟ್ಟುವುದಿಲ್ಲ" ಎನ್ನುತ್ತ ಕಾಲಿಗೆ ಬಿದ್ದನು. ಕಣ್ಣೀರು ಸುರಿಸುತ್ತಿದ್ದ ಬಾಲಕನನ್ನು ಮಾವ ಬಿಗಿಯಾಗಿ ಅಪ್ಪಿಕೊಂಡು ಮುದ್ದುಗರೆಯುತ್ತ, ಆನಂದಭಾಷ್ಪ ಸುರಿಸಿದರು. "ಮಗು ಇಂದಿನಿಂದ ಇಂದಿನಿಂದ ಇಂದಿನಿಂದ ಇದು ನನ್ನ ಹಾರ್ಮೋನಿಯಮ್ ಅಲ್ಲ. ನಿನ್ನದು ಅದು ನಿನ್ನ ಆಸ್ತಿ" ಎಂದರು.

**ಅಥವಾ**

ಉತ್ತರ : ಪಂಚಾಕ್ಷರ ಗವಾಯಿಗಳ ಸಂಚಾರಿ ಪಾಠಶಾಲೆಯು ಹೊಳೆ ಆಲೂರಿನಲ್ಲಿ ಕ್ಯಾಂಪ್ ಹಾಕಿದ್ದ ಸಂದರ್ಭದಲ್ಲಿ ಪುಟ್ಟರಾಜರ ತಾಯಿಯಾದ ಸಿದ್ದಮ್ಮನವರು ಮಗನನ್ನು ಕಾಣಲು ಬಂದರು. ಸಂಗೀತದ ಸಕಲ ವಿದ್ಯೆಗಳಲ್ಲಿ ಪಾರಂಗತನಾದ ಮುದ್ದು ಮಗನನ್ನು ನೋಡಿದ ತಾಯಿಗೆ ಪ್ರೀತಿ ತುಂಬಿ ಬಂತು. ಪಂಚಾಕ್ಷರ ಗವಾಯಿಗಳ ಪಾದಕ್ಕೆರಗಿ ಮಗನನ್ನು ಮನೆಗೆ ಕಳುಹಿಸಿಕೊಡುವಂತೆ ಬೇಡಿಕೊಂಡರು. ಗವಾಯಿಗಳು, "ಅವನು ಬಂದರೆ ಕರೆದುಕೊಂಡು ಹೋಗು ತಾಯಿ" ಎಂದು ಹೇಳಿದರು. ಸಿದ್ದಮ್ಮನವರು ಪುಟ್ಟರಾಜರನ್ನು ಮನೆಗೆ ಬರುವಂತೆ ಕೇಳಿಕೊಂಡರು. ಆದರೆ ಪುಟ್ಟರಾಜರು, "ನನಗೆ ನನ್ನ ಸರ್ವಸ್ವವೂ ಗುರುಗಳು, ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ. ಸಮಾಜದ ಋಣವನ್ನು ತೀರಿಸದೆ ಅದು ಹೇಗೆ ನಿನ್ನ ಜೊತೆ ಬರಲಿ ತಾಯಿ, ನೀನೆ ಹೇಳು? ಭವದಲ್ಲಿಯ ಎಲ್ಲ ಬಂಧುಗಳು ತೊಡೆದು ಹಾಕಿರುವೆ. ಗುರು ಪಂಚಾಕ್ಷರರೇ ನನ್ನ ಸರ್ವಸ್ವ, ಅವರ ಆಜ್ಞಾಧಾರಕ ನಾನು. ನನ್ನ ಮಗನೆಂಬ ಭಾವವನ್ನು ತೊಡೆದು ಹಾಕಿ ನನ್ನನ್ನು ಸಮಾಜಕ್ಕರ್ಪಿಸು ತಾಯಿ ಎಂದು ಕೇಳಿಕೊಂಡರು. ಸಿದ್ದಮ್ಮನವರು ಸಾಮಾನ್ಯರಂತೆ ವರ್ತಿಸದೆ ಮಹಾತಾಯಿಯಂತೆ ಮಗನಿಗೆ ಆಶೀರ್ವದಿಸಿದರು. "ನಿನ್ನಂಥ ಶ್ರೇಷ್ಠ ಪುತ್ರರತ್ನವೊಂದನ್ನು ಹೆತ್ತ ಭಾಗ್ಯ ನನ್ನದಾಗಲಿ. ಹೆಂಡತಿ, ಮಕ್ಕಳು, ಸಂಸಾರವೆಂಬ ಬಂಧನದಲ್ಲಿ ಬಂಧಿಯಾಗುವುದು ನಿನಗಿಷ್ಟವಿಲ್ಲದಿದ್ದರೆ ನನ್ನ ಜೊತೆ ಬರುವುದು ಬೇಡ ಮಗನೆ. ಗುರು ಪಂಚಾಕ್ಷರರು

ತೋರುವ ಮಾರ್ಗದಲ್ಲಿ ನೀನು ಅಮರನಾಗು. ಕಂದ" ಎಂದು ಮಗನನ್ನು ಅಂತಃಕರಣ ತುಂಬಿ ಹರಿಸಿದರು. ಹೀಗೆ ಪುಟ್ಟರಾಜರು ಲೌಕಿಕ ಬಂಧನಗಳ ಹೊಸ್ತಿಲನ್ನು ದಾಟಿ ಸಮಾಜಕ್ಕೆ ಮುಡುಪಾದರು.

**XI. 36. ಉತ್ತರ :** **1 X 4 = 4 (2+2)**

**ಅ)** ನಮಸ್ತೆ ಎನ್ನುತ್ತೇವೆ. ನಮಸ್ಕಾರ ಎನ್ನುತ್ತೇವೆ. ಆ ರೀತಿ ಹೇಳಿದಾಗ ಎರಡು ಅಂಗೈಗಳನ್ನು ಜೋಡಿಸಿ ಮೇಲೆ ಎತ್ತುತ್ತೇವೆ. ಆ ರೀತಿ ಎತ್ತಿದ್ದರ ಜೊತೆಗೆ ತಲೆಯನ್ನು ಬಾಗಿಸುತ್ತೇವೆ. ಈ ರೀತಿಯ ನಮಸ್ಕಾರ ಮಾಡುವುದರ ಅರ್ಥ ವಿಶೇಷತೆ ಏನೆಂದರೆ ನಾವೆಲ್ಲರೂ ಆತ್ಮ ಸ್ವರೂಪರು. ಆದ್ದರಿಂದ ನಾವೆಲ್ಲ ಅಣ್ಣ–ತಮ್ಮಂದಿರು, ಅಕ್ಕ–ತಂಗಿಯರು, ಆದ ಕಾರಣ ಪರಸ್ಪರವಾಗಿ ಪ್ರೇಮವನ್ನು ಕೊಟ್ಟು– ಪಡೆದು ಬದುಕಬೇಕಾಗಿದೆ. ಏಕೆಂದರೆ ನಾವೆಲ್ಲ ಪ್ರೇಮ ಸ್ವರೂಪರು. ಪ್ರೇಮವೇ ಆತ್ಮದ ನಿಜವಾದ ಸ್ವರೂಪವಾಗಿದೆ.

ಆ) ನಾವು ಎರಡು ಕೈ ಜೋಡಿಸಿ ಮಾಡುವ ನಮಸ್ಕಾರದ ಅರ್ಥ. ನಾವು ಯಾರಿಗೆ ನಮಸ್ಕಾರ ಹೋಳುತ್ತೇವೆಯೋ ಅವರು, ನಮಸ್ಕಾರ ಮಾಡಿದಾಗ ನಮಗೂ, ಅವರಿಗೂ ಇದು ನೆನಪಾಗುತ್ತದೆ. ನೆನಪಾಗಬೇಕು. ಎರಡು ಕೈ ಸೇರಿದಾಗ ಚಪ್ಪಾಳೆಯಂತೆ,ಆದರೆ ನಮ್ಮ ನಮಸ್ಕಾರ ಚಪ್ಪಾಳೆಯಲ್ಲ, ಜೋಡಿಸಿದ ಕೈಯನ್ನು ಎತ್ತುವುದು ಆತ್ಮೋದ್ಧಾರ ಎಂದು ನಾವು ತಿಳಿಯಬೇಕಾಗಿದೆ. ಗುರು ಹಿರಿಯರನ್ನು ಕಂಡಾಗ ಗೌರವದಿಂದ ತಲೆಬಾಗಿ ನಮಸ್ಕರಿಸುವುದು ನಮ್ಮ ಸಂಸ್ಕೃತಿಯ ಪ್ರತೀಕ.

**XII. ಪ್ರಬಂಧ ಬರೆವಣಿಗೆ ( ಯಾವುದಾದರೂ ಒಂದಕ್ಕೆ ಮಾತ್ರ)**

37. ಪರಿಸರ ಮಾಲಿನ್ಯ – ಪರಿಹಾರೋಪಾಯಗಳು **ಪೀಠಿಕೆ / ಪ್ರಸ್ತಾವನೆ = 01**

**ಅಥವಾ** **ವಿಷಯ ನಿರೂಪಣೆ = 02**

ಗ್ರಂಥಾಲಯ **ಭಾಷಾಶೈಲಿಗೆ, ಮುಕ್ತಾಯ / ಉಪಸಂಹಾರ = 01**

**XIII. 38. ಉತ್ತರ : ಪತ್ರ ಲೇಖನ**

**ವ್ಯಾವಹಾರಿಕ ಪತ್ರ :** **ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ = 01**

**ಪತ್ರದ ಒಡಲು = 02**

**ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ = 01**

**ವಿನ್ಯಾಸ, ಪದಬಳಕೆ, ಶೈಲಿ = 01**

**ಅಥವಾ**

**ವೈಯಕ್ತಿಕ ಪತ್ರ :** **ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ = 01**

**ಪತ್ರದ ಒಡಲು = 02**

**ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ = 01**

**ವಿನ್ಯಾಸ, ಪದಬಳಕೆ, ಶೈಲಿ = 01**

## ಮಾದರಿ ಉತ್ತರ ಪತ್ರಿಕೆ – 4

**I.** ಬಹು – ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : **4X 1 = 4**

1. ಡ) ಕತ್ತಲು

2. ಅ) ವರ್ಣ

3. ಡ) ಸವರ್ಣದೀರ್ಘ

4. ಅ) ನಿಷ್ಕರುಣೆ

**II.** ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ : **12 X 1 = 12**
(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)

5. ಗಿಳಿಯ ತತ್ವನಿಷ್ಠೆ ಹಾಗೂ ಪರಹಿತಾಕಾಂಕ್ಷಿ ಗುಣವನ್ನು ಇಂದ್ರನು ಮೆಚ್ಚಿಕೊಂಡನು.

6. ಬೇಡನು ಪ್ರಾಣಿಗಳನ್ನು ಕೊಲ್ಲಲು ಮಾಡುತ್ತಿದ್ದ ಉಪಾಯ ವಿಷ ಸವರಿದ ಬಾಣಗಳನ್ನು ಉಪಯೋಗಿಸುತ್ತಿದ್ದನು.

7. ಈ ನಾಡಿನ ಬೆನ್ನೆಲುಬು ಕೃಷಿಕ / ರೈತ.

8. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು 'ರಂಗ ಜಂಗಮ' ಎಂದು ಖ್ಯಾತರಾಗಿದ್ದಾರೆ

9. ಸಸ್ತನಿಗಳ ಆಶ್ರಯತಾಣಗಳು ಗುಹೆ, ಪೊಟರೆ, ಗೂಡು, ಬಿಲದಂಥ ಜಾಗಗಳು.
10. ರಾಮು, ಕಿಟ್ಟಿ, ನಾಣಿ, ಮಾಧು ಗೋಪಾಲನ ಗೆಳೆಯರು.
11. ಏಣಿಯನ್ನು ಬಳಸಿ ಮೇಲೇರಿದವರಿಗೆ ಅವರು ಹೇಗೆ ಇಳಿಯುತ್ತಾರೆಂದು ನಾನೂ ನೋಡುತ್ತೇನೆ ಎಂದು ಏಣಿಯು ಸವಾಲು ಹಾಕಿದೆ.
12. ಸಿದ್ಧಾರ್ಥ ಮಡದಿ, ಮಗು ಹಾಗು ಅರಮನೆಯ ಮೋಹವನ್ನು ತೊರೆದನು.
13. ಜೀವ ಪ್ರೀತಿಯ ಎದುರು ಎಲ್ಲವೂ ನಶ್ವರ ಎಂಬುದು ಬುದ್ಧನು ಅರಿತುಕೊಂಡ ಬದುಕಿನ ಸತ್ಯ.
14. ನಮ್ಮ ಕರ್ತವ್ಯಗಳನ್ನು ಶಾಂತಿಯಿಂದ ಮುಗಿಸಬೇಕೆಂದು ಕವಿ ಹೇಳಿದ್ದಾರೆ
15. ಕುಣಿಗಲ್ ಕೆರೆಯು ಪೂರ್ವ ದಿಕ್ಕಿನಲ್ಲಿದೆ.
16. ಅರ್ಜುನನು ಉತ್ತಕುಮಾರನನ್ನು ನಾಡನರಿ ಎಂದು ಕರೆದಿದ್ದಾನೆ.

**III.** ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. **8 X 2 = 16**
(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು)
17. "ಬಿಳಿಯ ಉದ್ದನೆಯ ಅಂಗಿ, ಪಂಚೆ, ತಲೆಯ ಮೇಲೆ ಅಂದವಾಗಿ ಸುತ್ತಿದ ಕಾವಿಬಣ್ಣದ ಪೇಠ, ಹಣೆಯಲ್ಲಿ ವಿಭೂತಿ, ಹುಬ್ಬುಗಳೆರಡರ ನಡುವೆ ಗಂಧದ ಬೊಟ್ಟು, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಕೈಯಲ್ಲೊಂದು ಊರುಗೋಲು".
18. ಸಾಗರದ ದ್ವೀಪ, ಗಿರಿಶಿಖರದ ನೆತ್ತಿ, ನಬಿಡ ವನಶ್ರೇಣಿ, ಕಗ್ಗತ್ತಲ ಕಣಿವೆ, ಶಿತಲ ಧ್ರುವಪ್ರದೇಶ ಹೀಗೆ ಹಕ್ಕಿಗಳು ತಮ್ಮ ಗೂಡನ್ನು ಎಲ್ಲೆಲ್ಲೂ ಕಟ್ಟಿಕೊಳ್ಳಬಲ್ಲವು.

19. ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬೆಲ್ಲ ಪ್ರೀತಿಯ ಹೊಳೆಯು ಉಕ್ಕಿ ಹರಿಯಿತು. ಹಕ್ಕಿಗಳ ಗೂಡಿನಲ್ಲಿ ಹೊಸಹಾಡು ಹುಟ್ಟಿ ಹೊಸರಾಗವು ಕೇಳಿಬಂತು. ಹೂವಿನ ಮಕರಂದವನ್ನು ಸವಿಯಲು ದುಂಬಿಯು ಹೂವನ್ನು ಸೇರಿತು. ಕಾಡಿನ ಗಿಡಗಿಡವು ಒಂದನ್ನೊಂದು ಅಪ್ಪಿಕೊಂಡು ಕುಣಿಯುವಂತೆ ತೋರಿತು.

20. ಸೂರ್ಯನ ಕಿರಣಗಳು ಮೂಡಿದಾಗ ಇಬ್ಬನಿಯು ಸದ್ದಿಲ್ಲದೇ ಕರಗುತ್ತದೆ. ತಟ್ಟೆಯಲ್ಲಿ ಕರ್ಪೂರವು ಮೌನವಾಗಿ ಉರಿಯುತ್ತದೆ. ಬೆಳಕನ್ನು ಕೊಡುತ್ತದೆ. ದೀಪದೆದುರಿಗೆ ಕತ್ತಲು ಸದ್ದಿಲ್ಲದೇ ಸರಿದು ಹೋಗುತ್ತದೆ. ಅದೇ ರೀತಿ ಮಾನವನೂ ಸದ್ದು ಮಾಡದೆ ಶಾಂತವಾಗಿ ಬಾಳಬೇಕು ಎಂದು ಕವಿ ಈ ಹೋಲಿಕೆಗಳ ಮೂಲಕ ಹೇಳಿದ್ದಾರೆ.

21. ಕೆರೆಗಳು ರೈತರ ಬದುಕಿಗೆ ಆಧಾರವಾಗಿದೆ. ಆದ್ದರಿಂದ ಕೆರೆಗಳು ತುಂಬಿದಾಗ ಬಾಗಿನ ಅರ್ಪಿಸುವ ಸಂಪ್ರದಾಯವಿದೆ. ಈ ಸಂದರ್ಭದಲ್ಲಿ ಪೂಜಾ ಸಾಮಗ್ರಿಗಳೊಂದಿಗೆ ಸೀರೆ, ಕುಪ್ಪಸ ಇತ್ಯಾದಿಗಳನ್ನು ಮೊರದಲ್ಲಿಟ್ಟು ನೀರಿಗೆ ಬಿಡಲಾಗುತ್ತದೆ. ಅದಕ್ಕಾಗಿ ಭಾವ ಬಣ್ಣದ ಸೀರೆಯನ್ನು ತಂದದ್ದು.

22. ಕೌರವನ ಸೈನ್ಯವನ್ನು ನೋಡಿ ಉತ್ತರನು 'ನಮೋ' ಎಂದು 'ಈ ಸಾರಥಿ ನನ್ನನ್ನು ಕೊಂದನು' ಎನ್ನುತ್ತ ಮೆಲ್ಲನೆ ರಥದ ಹಿಂಭಾಗಕ್ಕೆ ಬಂದು ರಥದಿಂದ ಧುಮುಕಿ ಓಡಲು ತೊಡಗುತ್ತಾನೆ. ಅದನ್ನು ನೋಡಿದ ಅರ್ಜುನನು ಮನದಲ್ಲಿ ನಗುತ್ತಾನೆ.

23. "ಕಾಯುವುದು ದೇವರ ಕೆಲಸ, ಕೊಲ್ಲುವುದು ರಾಕ್ಷಸರ ಕೆಲಸ" ಎಂದು ವೈದ್ಯರು ಹೇಳಿದ ಮಾತುಗಳು ಭೀಮನಾಯಕನ ಮೇಲೆ ಪರಿಣಾಮ ಬೀರಿ ಮನಃ ಪರಿಣಾಮವಾಯಿತು.

24. ಭೀಮನಾಯಕನು " ಆ ಕಾಣದ ದೇವರು ಇದ್ದಾನೊ ಇಲ್ಲವೋ ಗೊತ್ತಿಲ್ಲ! ಆದರೆ ನೀವು ಮಾತ್ರ ನನ್ನ ಕಣ್ಣಿಗೆ ಕಾಣುವ ದೇವರು. ನಿಮ್ಮ ಉಪಕಾರವನ್ನು ಎಂದೂ ಮರೆಯಲಾರೆ" ಎಂದನು.

**IV. ಕೆಳಗಿನ ಕವಿ / ಸಾಹಿತಿ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು.**

25. ಅ.ರಾ.ಮಿತ್ರ **ಜನ್ಮ ಸ್ಥಳ, ಕಾಲ =01**
**ಕೃತಿಗಳು, ಪ್ರಶಸ್ತಿ = 01**
**ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ = 01**

ಅಕ್ಕಿಹೆಬ್ಬಾಳು ರಾಮಣ್ಣಾ ಮಿತ್ರ ಇವರು 1935 ರಲ್ಲಿ ಮಂಡ್ಯ ಜಿಲ್ಲೆಯ ಕೆ. ಆರ್. ಪೇಟ್ ತಾಲ್ಲೂಕಿನ ಅಕ್ಕಿಹೆಬ್ಬಾಳದಲ್ಲಿ ಜನಿಸಿದರು. ಇವರು ಬರೆದ ಪ್ರಮುಖ ಕೃತಿಗಳೆಂದರೆ 'ನಾನೇಕೆ ಕೊರೆಯುತ್ತೇನೆ', 'ಛಂದೋಮಿತ್ರ', 'ಮೇಘದೂತ', 'ಮಹಾಭಾರತ ಪಾತ್ರ ಸಂಗತಿಗಳು', 'ವಚನಕಾರರು ಮತ್ತು ಶಬ್ಧಕಲ್ಪ',' ಕೈಲಾಸಂ ಬದುಕು ಬರಹ' ಮುಂತಾದವು. ಪ್ರಶಸ್ತಿಗಳು ನವರತ್ನರಾಂ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಕಾವ್ಯನಂದ ಪರಸ್ಕಾರ, ಗೊರುರು ಸಾಹಿತ್ಯ ಸಂದಿವೆ. ಪ್ರಸ್ತುತ ಪಾಠವನ್ನು "ಮಹಾಭಾರತ(ವ್ಯಾಸ) ಪಾತ್ರ ಸಂಗತಿಗಳು' ಪುಸ್ತಕದಿಂದ ಆರಿಸಲಾಗಿದೆ.

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯುವುದು.**

26. ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲು **ಪಾಠ್ಯಾಂಶಕ್ಕೆ =02**
ದೀಪದೆದುರಿಗೆ ತಿಮಿರ ಸರಿಯುವಂತೆ **ಪದ ಬಳಕೆ ಮತ್ತು ಶೈಲಿ = 01**
ಶಾಂತಿಯಲಿ ಬದುಕಿನೀ ಕರ್ತವ್ಯವನು ಮುಗಿಸು;
ಕೂಗಾಡಿ, ಹಾರಾಡಿ ಫಲವದೇನು?

ಈ ಪದ್ಯವನ್ನು ಕವಿ ಸಿ.ಪಿ.ಕೆ ಅವರ 'ಬೊಗಸೆ' ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ. ಎಲೆ ಜೀವಿಯೆ, ಗದ್ದಲ ಮಾಡದೆ ಜೀವಿಸು.ತೀರವನ್ನು ಸೇರಿಕೊ. ಆರತಿಯ ತಟ್ಟೆಯಲ್ಲಿರುವ ಕರ್ಪೂರವು ಸದ್ದಿಲ್ಲದೆ ಕರಗುತ್ತದೆ. ದೇಪ ಉರಿಸಿದಾಗ ಕತ್ತಲೆ ಸರಿಯುತ್ತದೆ. ಹಾಗೆಯೇ ಸಮಾಧಾನದಿಂದ ಬದುಕಿನ ಕರ್ತವ್ಯವನ್ನು ಪೂರೈಸು, ಕೂಗಾಟ, ಹಾರಾಟಗಳಿಂದ ಏನು ಉಪಯೋಗ? ಹಸಿ ಸೌದೆಯು

ಉರಿಯುವಾಗ ಬುಸುಗಟ್ಟುವ ಧ್ವನಿಯನ್ನು ಹೊರಡಿಸುತ್ತದೆ. ಸ್ಫೋಟಕ ವಸ್ತುವಿಗೆ ಕಿಡಿ ತಾಕಿದರೆ ಅದು ಸಿಡಿದು ಆರ್ಭಟಿಸುತ್ತದೆ. ಹಾಗೆ ಇರಬೇಡ. ಸೂರ್ಯನ ಕಿರಣಗಳಿಗೆ ಕರಗುವ ಮಂಜಿನ ಹನಿಯ ಹಾಗೆ ಬದುಕು. ಕೋಪ ಒದ್ದಾಟಗಳನ್ನು ಬಿಟ್ಟು ಮೌನವಾಗಿರು ಎಂದು ತಿಳಿಸುತ್ತಾರೆ.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸುವುದು:**

27. "ವನಜಮುಖಿ" **ಅಲಂಕಾರವನ್ನು ಹೆಸರಿಸುವುದು = 01**

**ಲಕ್ಷಣ ಮತ್ತು ಸಮನ್ವಯಗೊಳಿಸುವುದು = 02**

ಉಪಮಾನ: ವನಜ
ಉಪಮೇಯ: ಮುಖಿ (ಅರಮನೆಯ ಸಖಿಯರು)
ಇಲ್ಲಿ ಉಪಮಾನವಾದ ವನಜಕ್ಕೂ ಉಪಮೇಯವಾದ ಮುಖಿಯರಿಗೂ ಯಾವುದೇ ವ್ಯತ್ಯಾಸವನ್ನು ತೋರಿಸದೆ ಎರಡು ಒಂದೇ ಎಂದು ಅಭೇಧವನ್ನೂ ಕಲ್ಪಿಸಿ ಹೇಳಿರುವುದರಿಂದ ಇದು ರೂಪಕಾಲಂಕಾರವಾಗಿದೆ.

**VII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ.**

28. "ಮನಸಿದ್ದರೆ ಮಾರ್ಗ" **ಗಾದೆಯ ಮಹತ್ವದ ವಿವರಣೆ = 01**

**ಅಥವಾ** **ಉದಾಹರಣೆಯೊಂದಿಗೆ ಅರ್ಥ ವಿವರಣೆ = 01**

"ಒಕ್ಕಲಿಗ ಒಕ್ಕದಿದ್ದರೆ ಜಗವೆಲ್ಲ ಬಿಕ್ಕುವುದು." **ಭಾಷಾಶೈಲಿಗೆ–ಪದಬಂಧಗಳಿಗೆ = 01**

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.**

**ಕೃತಿ, ಕರ್ತೃ, ಪಠ್ಯದ ಹೆಸರು = 01**
**ಯಾರು–ಯಾರಿಗೆ ಸಂದರ್ಭ = 01**
**ಭಾಷಾಶೈಲಿಗೆ–ಪದಬಂಧಗಳಿಗೆ = 01**

29. "ಅವರು ಯಾರಿಗೂ ಮೋಸ ವಂಚನೆ ಮಾಡುವವರಲ್ಲ"

ಈ ವಾಕ್ಯವನ್ನು ಡಾ.ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ರಚಿಸಿದ 'ವ್ಯಕ್ತಿತ್ವ' ಎಂಬ ಪ್ರಬಂಧ ಸಂಕಲನದಿಂದ ಆರಿಸಲಾದ ಅಸಿ–ಮಸಿ–ಕೃಷಿ ಎಂಬ ಪಾಠದಿಂದ ಆರಿಸಲಾಗಿದೆ. ರೈತರು ಕಷ್ಟಪಡುವವರಷ್ಟು ಮತ್ತೊಬ್ಬರಿಲ್ಲ. ಅವರಂತೆ ತೊಂದರೆ ಅನುಭವಿಸುವವರೂ ಬೇರೊಬ್ಬರಿಲ್ಲ. ಮಳೆಯ ಅಭಾವ, ಇಲ್ಲವೇ ಅತಿವೃಷ್ಟಿ, ಭೂಮಿ ಬರಡಾಗುತ್ತಿರುವುದು, ಕಳಪೆ ಬೀಜಗಳು, ಇತ್ಯಾದಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದರೂ ರೈತರು ನಿರಾಶವಾದಿಗಳಾಗದೆ ಬಾಳನ್ನು ನಡೆಸುತ್ತಿದ್ದಾರೆ. ಆದರೆ ಅವರು ಯಾರಿಗೂ ಎಂದಿಗೂ ಮೋಸ ಮಾಡುವುದಿಲ್ಲ ಎಂದು ರೈತರ ಪ್ರಾಮಾಣಿಕತೆಯನ್ನು, ಕರ್ತವ್ಯ ನಿಷ್ಠೆಯನ್ನು ಈ ಮಾತಿನಲ್ಲಿ ವಿವರಿಸಲಾಗಿದೆ.

30. "ಮಗು ಇಂದಿನಿಂದ ಇದು ನನ್ನ ಹಾರ್ಮೋನಿಯಮ್ ಅಲ್ಲ"

ಈ ವಾಕ್ಯವನ್ನು ಎಂ. ಕೆ ರಮೇಶಗೌಡ ಅವರ 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ' ಎಂಬ ಪಾಠದಿಂದ ಆರಿಸಲಾಗಿದೆ. ಪುಟ್ಟರಾಜರು ಹಾರ್ಮೋನಿಯಮ್ ನುಡಿಸಿದ ಪ್ರಸಂಗದ ಬಗ್ಗೆ ತಿಳಿಸುವಾಗ ಈ ಸಾಲನ್ನು ತಿಳಿಸಲಾಗಿದೆ. ಬಾಲಕ ಪುಟ್ಟರಾಜರು ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಅವರ ಮಾವನವರ ಹಾರ್ಮೋನಿಯಮ್ ನುಡಿಸಿದರು. ಅದರ ನಾದ ಮಾಧುರ್ಯಕ್ಕೆ ಮನಸೋತ ಜನರು ಮನೆಯ ಒಳಗೆ ಸೇರಿದರು. ಹೊರಗೆ ಹೋಗಿದ್ದ ಮಾವ ಗಾಯನ ಕೇಳಿ ಸಂತೋಷಗೊಂಡು ಮೇಲಿನ ವಾಕ್ಯ ಹೇಳಿದರು.

31. “ಹುಟ್ಟಿದ ಮಕ್ಕಳಿಗೆ ಬದುಕಿನ ಪಾಠ ಹೇಳುವ ಶಾಲೆ ಅದು”

ಈ ವಾಕ್ಯವನ್ನು ಕೆ. ಕೃಪಾಕರ ಮತ್ತು ಸೇನಾನಿ ಬರೆದಿರುವ ‘ ಹಕ್ಕಿಗೂಡುಗಳ ನಿಗೂಢ ಜಗತ್ತು ಪಾಠದಿಂದ ಆರಿಸಲಾಗಿದೆ. ಹಕ್ಕಿ ಗೂಡಿನಲ್ಲಿ ನೋವಿದೆ ನಲಿವಿದೆ, ಸಂತಸದ ಧ್ವನಿಯಿದೆ ಜೀವ ಕಣ್ತೆರೆಪ ಸೃಷ್ಠಿಯ ಅಚ್ಚರಿಯಿದೆ. ಕಷ್ಟಗಳನ್ನು ಎದುರಿಸಿ ಬದುಕುವ ಕಲೆಯನ್ನು ಪಕ್ಷಿಗಳು ತಮ್ಮ ಮರಗಳಿಗೆ ಕಲಿಸುತ್ತವೆ. ಹುಟ್ಟಿದ ಮಕ್ಕಳಿಗೆ ಪಾಠ ಹೇಳುದ ಶಾಲೆ ತಾಯಿ ಮಕ್ಕಳ ಒಗ್ಗಟ್ಟನ್ನು ಇಲ್ಲಿ ಕಾಣಬಹುದು ಎಂದು ಹೇಳುವಾಗ ಮೇಲಿನ ವಾಕ್ಯ ಬಂದಿದೆ.

32. “ಇವರಿಗೆ ಭಾರ ಹೊತ್ತವರ ಕಾಳಜಿಯೇ ಇಲ್ಲ”

ಸುಕನ್ಯಾ ಮಾರುತಿ ಅವರು ರಚಿಸಿದ ಸಮಗ್ರ ಕವನಸಂಕಲನದಿಂದ ಆರಿಸಲಾದ ‘ಏಣಿ’ ಎಂಬ ಪದ್ಯದಿಂದ ಈ ವಾಕ್ಯವನ್ನು ಆರಿಸಲಾಗಿದೆ. ಶ್ರಮಿಕರ ಮತ್ತು ಜನಸಾಮಾನ್ಯರ ಸಹಾಯ ಪಡೆದು ಪದವಿ, ಅಧಿಕಾರ, ಕೀರ್ತಿ, ಹಣ, ಗೌರವ, ಯಶಸ್ಸು ಪಡೆದು ಮೇಲೇರಿರುತ್ತಾನೆ. ಹೀಗೆ ಮೇಲೇರಿದವನಿಗೆ ಅಹಂಕಾರ ತುಂಬಿಕೊಳ್ಳುತ್ತದೆ. ತನ್ನ ಏಳಿಗೆಗೆ ಕಾರಣರಾದವರನ್ನು ಮರೆಯುತ್ತಾನೆ. ತನ್ನ ಈಗಿನ ಸ್ಥಿತಿಗೆ ಕಾರಣರಾದವರ ಬಗ್ಗೆ ಕಾಳಜಿಯನ್ನು ತೋರಿಸುವುದಿಲ್ಲ. ಎಂಬುದನ್ನು ಈ ಮಾತಿನಲ್ಲಿ ಹೇಳಲಾಗಿದೆ.

33. “ಬೊಬ್ಬೆ ಹೊಡೆದಾವೆ ಬಾಳೆ ಮೀನು”

ಈ ವಾಕ್ಯವನ್ನು ಜನಪದ ಗೀತೆಯಿಂದ ಆಯ್ದ ‘ಮೂಡಲ್ ಕುಣಿಗಲ್ ಕೆರೆ’ ಎಂಬ ಪದ್ಯದಿಂದ ಆರಿಸಲಾಗಿದೆ. ಕೆರೆಗಳು ನೀರನ್ನು ಒದಗಿಸುವ ಮೂಲಕ ಗ್ರಾಮೀಣ ಬದುಕಿನ ಆಧಾರವಾಗಿವೆ. ಇದರ ಜೊತೆಗೆ ಉಪಕಸುಬಾದ ಮೀನುಗಾರಿಕೆಗೂ ಸಹಾಯಕವಾಗಿವೆ. ಕೆರೆಯಲ್ಲಿರುವ ಮೀನುಗಳನ್ನು ಹಿಡಿಯಲು ಮೀನುಗಾರರು ಬಂದಾಗ ಅವರನ್ನು ಕಂಡು ಮೀನುಗಳು ಭಯಪಡುವುದನ್ನು ಈ ಮಾತಿನಲ್ಲಿ ಹೇಳಲಾಗಿದೆ.

**IX. ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು**

**(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ನಾಲ್ಕು ಅಂಕಗಳು).** **1 X 4 = 4**

ನೀರ ಕಂಡಲ್ಲಿ ಮುಳುಗುವರಯ್ಯ
ಮರನ ಕಂಡಲ್ಲಿ ಸುತ್ತುವರಯ್ಯ
ಬತ್ತುವ ಜಲವ ಒಣಗುವ ಮರನ
ಮೆಚ್ಚಿದವರು ನಿಮ್ಮನ್ನೆತ್ತ ಬಲ್ಲರು ಕೂಡಲಸಂಗಮದೇವ.

ಅಥವಾ

ಮರವಿದ್ದು ಫಲವೇನುನೆಳಲಿಲ್ಲದನ್ನಕ್ಕ
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನ.

**X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯುವುದು.**

**ವಿಷಯಾಂಶಕ್ಕೆ = 03**

**ಭಾಷಾಶೈಲಿ, ಪದ ಬಳಕೆಗೆ =01**

ಗೋಪಾಲನು ಶಾಲೆಯಿಂದ ಹಿಂತಿರುಗಿ ಬರುವಾಗ ಹೂಗಳನ್ನು ಆಯಲಾರಂಭಿಸುತ್ತಾನೆ. ಆಗ ನಿಧಾನವಾಗಿ ಕತ್ತಲಾಯಿತು. ಗೋಪಾಲನಿಗೆ ಭಯವಾಗಿ ಗೋಪಾಲಣ್ಣಾ ಎಲ್ಲಿರುವೆ? ಎಂದು ಕರೆಯುತ್ತಾನೆ. ಆದರೆ ದನಗಳನ್ನು ಕಾಯುತ್ತಾ ಇನ್ನೆಲ್ಲಿಗೆ ಹೋದನೋ ಏನೋ? ಆದರೆ ಅಮ್ಮ ಹೇಳಿದ್ದಾಳೆ, ಇಲ್ಲಯೇ ಇರುತ್ತನಂತ. ಅಮ್ಮನ ಮಾತು ಸುಳ್ಳಾಗಲಾರದುಮತ್ತೆ ಕರೆದು ನೋಡುತ್ತೇನೆ. ಎಂದು ಕೊಂಡು ಮತ್ತೆ ಏ ಅಣ್ಣಾ ಏ ಗೋಪಾಲಣ್ಣಾ,ನನಗೆ ಹೆದರಿಕೆಯಾಗುತ್ತಿದೆ. ಅಣ್ಣಾ, ಕತ್ತಲಾಗುತ್ತಿದೆ, ಎಲ್ಲಿದ್ದೀಯಣ್ಣಾ ಎಂದು ಕರೆಯುತ್ತಾನೆ. ಅದನ್ನು ಕೇಳಿದ ಬನದ ಗೋಪಾಲನು ಏನೋ, ಗೋಪಾಲ? ಎಂದು ಮರೆಯೊಳಗಿಂದಲೆ ಕೇಳುತ್ತಾನೆ. ಅದನ್ನು ಕೇಳಿದ ಗೋಪಾಲ: ಅಣ್ಣಾ ಎಲ್ಲೀದ್ದಿಯಾ? ನನಗೆ ಹೆದರಿಕೆಯಾಗುತ್ತದೆ. ಹೆದರಿಕೆಯಾದರೆ ನಿನ್ನನ್ನು ಕರೆ ಅಂತ ಅಮ್ಮ ಹೇಳಿದ್ದಳು. ಅದಕ್ಕಾಗಿ ಕರೆದೆ ಎಂದನು. ಅದನ್ನು ಕೇಳಿದ ಬನದ ಗೋಪಾಲ ಹೆದರಬೇಡ, ನಾನಿಲ್ಲೆಯೇ ಇದ್ದೇನೆ. ಧೈರ್ಯವಾಗಿ ಮನೆಗೆ ಹೋಗು ಎಂದನು. ಆಗ ಗೋಪಾಲ : ಅಮ್ಮನನ್ನು ನೋಡುವುದಕ್ಕೆ ನೀನು ಮನೆಗೆ ಬರುವುದಿಲ್ಲವೇ? ಕತ್ತಲಲ್ಲಿ ಕಾಡಿನ ನಡುವೆ ಏಕಿರುವೆ? ಎಂದು ಕೇಳಿದನು. ಅದಕ್ಕೆ ಬನದ ಗೋಪಾಲ, ಅಮ್ಮನಿಗೆ ಹೇಳು ನಾನು ಆಮೇಲೆ ಹಿಂದಿನಿಂದ ಬರುತ್ತೇನೆ. ಅಮ್ಮ ನಿನಗಾಗಿ ಕಾದಿದ್ದಾಳೆ. ಬೇಗ ಹೋಗಪ್ಪ ಎಂದು ಹೇಳಿದನು.

**ಅಥವಾ**

**ಉತ್ತರ:** ಗೋಪಾಲ ಹೂವು ಕೊಯ್ಯಲು ಹೋದ ಹೂಬನ ಬಹಳ ಸುಂದರವಾಗಿತ್ತು. ಮಲ್ಲಿಗೆ, ಕೇದಗೆ, ಸಂಪಿಗೆ, ಪರ್ವತಬಾಳೆ, ಗೋರಂಟೆಯ ಹೂವು ಹೀಗೆ ವಿವಿಧ ಬಣ್ಣಗಳಿಂದ ಹೂಗಳು ಅರಳಿದ್ದವು. ಬಣ್ಣ ಬಣ್ಣದ ಹೂಗಳು ಅರಳಿರುವ ತೋಟವು ಸಾವಿರಾರು ಮಳೆಬಿಲ್ಲಿಗಳು ಸೇರಿ ಕುಣಿದಂತೆ ಕಾಣುತ್ತದೆ. ಅದರ ಜೊತೆಗೆ ಹಕ್ಕಿಗಳ ಇಂಪಾದ ಗಾನ, ತಂಪಾದ ಗಾಳಿ, ಸೂರ್ಯನ ಹೊಂಬೆಳಕು, ಹಸುರಾದ ಚಿಗುರು ಹುಲ್ಲಿನ ಮೇಲೆ ಕೋಟ್ಯಂತರ ಹಿಮಮಣಿಗಳು ಮಿರುಗುತ್ತಿದ್ದವು. ಶಾಲೆಯಿಂದ ಹಿಂತಿರುಗುವ ದಾರಿಯಲ್ಲಿ ಅರಳಿದ ಹೂ ಗೊಂಚಲು, ನೇರಿಲ ಮೊದಲಾದ ಹಣ್ಣುಗಳಿಂದ ಕೂಡಿದ ಮರದ ಟೊಂಗೆಗಳು ಬಾಗಿದ್ದವು. ಹೀಗೆ ಸುತ್ತಲು ರಮಣೀಯವಾದ ಪ್ರಕೃತಿಯಿತ್ತು.

**XI. 36. ಉತ್ತರ :** **1 X 4 = 4 (2+2)**

ಅ) ಒಂದು ಭಾಷೆ ಸತ್ವಪೂರ್ಣವಾಗಬೇಕಾದರೆ ಅದನ್ನಾಡುವ ಜನ ಅಭಿಮಾನಧನರೂ, ಬುದ್ಧಿಶಾಲಿಗಳು, ಪ್ರಯೋಗಶೀಲರೂ ಆಗಿರಬೇಕು. ನಾಲ್ಕೈದು ಶತಮಾನಗಳ ಹಿಂದೆ ಆಂಗ್ಲಭಾಷೆ ಯುರೋಪಿನ ಸಾಮಾನ್ಯ ಭಾಷೆಗಳಲ್ಲಿ ಒಂದಾಗಿತ್ತು.

ಆ) ಆಂಗ್ಲ ವಿಜ್ಞಾನಿಗಳು, ರಾಜಕಾರಣಿಗಳು, ಅರ್ಥಶಾಸ್ತ್ರಜ್ಞರು ಹೀಗೆ ಎಲ್ಲರೂ ತಮ್ಮ ಭಾಷೆಯನ್ನೇ ಬಳಸಿದುದರ ಪರಿಣಾಮವಾಗಿ ಆಭಾಷೆ ಬೆಳೆದು ಇಂದು ಪ್ರಪಂಚದ ದೊಡ್ಡ ಭಾಷೆಗಳಲ್ಲಿ ಒಂದಾಗಿದೆ. ಇದಕ್ಕೆಲ್ಲ ಆಂಗ್ಲ ಜನರ ಸಂಕಲ್ಪ, ಕೃಷಿ ಕಾರಣವೆಂದು ಬೇರೆ ಹೇಳಬೇಕಿಲ್ಲ.

**XII. ಪ್ರಬಂಧ ಬರೆವಣಿಗೆ (ಯಾವುದಾದರೂ ಒಂದಕ್ಕೆ ಮಾತ್ರ)**

37. ಪರಿಸರ ಮಾಲಿನ್ಯ – ಪರಿಹಾರೋಪಾಯಗಳು **ಪೀಠಿಕೆ / ಪ್ರಸ್ತಾವನೆ = 01**

**ಅಥವಾ** **ವಿಷಯ ನಿರೂಪಣೆ = 02**

ಗ್ರಂಥಾಲಯ **ಭಾಷಾಶೈಲಿಗೆ, ಮುಕ್ತಾಯ / ಉಪಸಂಹಾರ = 01**

**XIII. 38. ಉತ್ತರ : ಪತ್ರ ಲೇಖನ**

**ವ್ಯಾವಹಾರಿಕ ಪತ್ರ :**

ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ = 01
ಪತ್ರದ ಒಡಲು = 02
ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ = 01
ವಿನ್ಯಾಸ, ಪದಬಳಕೆ, ಶೈಲಿ = 01

**ಅಥವಾ**

**ವೈಯಕ್ತಿಕ ಪತ್ರ :**

ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ = 01
ಪತ್ರದ ಒಡಲು = 02
ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ = 01
ವಿನ್ಯಾಸ, ಪದಬಳಕೆ, ಶೈಲಿ = 01